ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮೇ 11, 2022

ಸಂಪುಟ : 48 ಸಂಚಿಕೆ : 360 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




ದಾವಣಗೆರೆಯ ಪದ್ಮಶ್ರೀ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಅನ್ವೇಷಕರು ಆರ್ಟ್ ಫೌಂಡೇಶನ್ ದಾವಣಗೆರೆ ಶಾಖೆ ವತಿಯಿಂದ ಹಮ್ಮಿಕೊಂಡಿದ್ದ ಅನ್ವೇಷಕರು ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದ ನಿಮಿತ್ತ ಶಿಬಿರಾರ್ಥಿಗಳಿಂದ ಕುಮಾರವ್ಯಾಸ ಭಾರತದ 'ಕರ್ಣ ಭೇದ' ವಾಚನ ಪ್ರಸ್ತುತ ಪಡಿಸಲಾಯಿತು.

## ಹಿಂದೂಗಳಿಗೆ ಅಲ್ಪಸಂಖ್ಯಾತರ ಸ್ಥಾನಮಾನ

# ಉಲ್ಟಾ ಹೊಡೆದ ಕೇಂದ್ರಕ್ಕೆ ತರಾಟೆ

**ರಾಜ್ಯಗಳಿಗೂ ಅಲ್ಪಸಂಖ್ಯಾತರನ್ನು ಗುರುತಿಸುವ ಅಧಿಕಾರ ಇದೆ ಎಂದಿದ್ದ ನಿಲುವು ಬದಲಿಸಿದ ಕೇಂದ್ರ**

ನವದೆಹಲಿ, ಮೇ 10 – ರಾಜ್ಯ ಮಟ್ಟದಲ್ಲಿ ಹಿಂದೂಗಳನ್ನು ಅಲ್ಪಸಂಖ್ಯಾತರೆಂದು ಗುರುತಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಭಿನ್ನ ನಿಲುವುಗಳನ್ನು ತಳೆಯುತ್ತಿರುವುದನ್ನು ಸುಪ್ರೀಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ರಾಜ್ಯಗಳೂ ಸಹ ಅಲ್ಪಸಂಖ್ಯಾತರನ್ನು ಗುರುತಿಸಬಹುದು ಎಂದು ಕೇಂದ್ರ ಸರ್ಕಾರ ಇದಕ್ಕೂ ಮುಂಚೆ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ನಂತರ ಉಲ್ಟಾ ಹೊಡೆದ ಕೇಂದ್ರ ಸರ್ಕಾರ, ಅಲ್ಪಸಂಖ್ಯಾತರನ್ನು ಗುರುತಿಸುವ ಅಧಿಕಾರ ತನಗಷ್ಟೇ ಇದೆ. ಈ ಬಗ್ಗೆ ರಾಜ್ಯಗಳ ಜೊತೆ ಚರ್ಚೆ ನಡೆಸಬೇಕಿದೆ ಎಂದು ಹೇಳಿತ್ತು.

ಸೋಮವಾರ ಸುಪ್ರೀಂ ಕೋರ್ಟ್ ಎದುರು ಹೊಸ ನಿಲುವು ತಿಳಿಸಿದ ಸರ್ಕಾರ, ರಾಜ್ಯಗಳು ಹಾಗೂ ಸಂಬಂಧಿಸಿದವರ ಜೊತೆ ಚರ್ಚಿಸಿದ ನಂತರ ತಾನೇ ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದೆ.

ಹಿಂದೂಗಳು ಕಡಿಮೆ ಸಂಖ್ಯೆಯಲ್ಲಿರುವ ರಾಜ್ಯಗಳಲ್ಲಿ ಅಲ್ಪಸಂಖ್ಯಾತ ಸ್ಥಾನಮಾನ ನೀಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಾಗಿದೆ. ಈ ಬಗ್ಗೆ ಉತ್ತರಿಸಲು ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದರೂ ಕೇಂದ್ರ ಉತ್ತರಿಸಿರಲಿಲ್ಲ. ದಂಡ ಪಾವತಿಸಿದ ನಂತರವೇ ಕೇಂದ್ರ ತನ್ನ ನಿಲುವು ತಿಳಿಸಲು ಸುಪ್ರೀಂ ಕೋರ್ಟ್ ಅವಕಾಶ ಕೊಟ್ಟಿತ್ತು.

ಮಾರ್ಚ್ ತಿಂಗಳಲ್ಲಿ ಸುಪ್ರೀಂ ಕೋರ್ಟ್ ಎದುರು ಹಾಜರಾಗಿದ್ದ ಕೇಂದ್ರ ಸರ್ಕಾರ, ರಾಜ್ಯಗಳೂ ಸಹ ಹಿಂದೂಗಳು ಮತ್ತಿತರೆ ಸಮುದಾಯಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ನಿರ್ಧಾರ ತೆಗೆದುಕೊಳ್ಳಬಹುದು ಎಂದು ಹೇಳಿತ್ತು.

10 ರಾಜ್ಯಗಳಲ್ಲಿ ಹಿಂದೂಗಳು ಕಡಿಮೆ ಸಂಖ್ಯೆಯಲ್ಲಿದ್ದು, ಅವರಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ, ಅಲ್ಪಸಂಖ್ಯಾತರನ್ನು ಗುರುತಿಸಲು ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ನಾಲ್ಕು ವಾರಗಳ ಸಮಯ ನೀಡಿತ್ತು.

ಈ ಬಗ್ಗೆ ಪ್ರಸ್ತಾಪಿಸಿದ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಹಾಗೂ ಎಂ.ಎಂ. ಸುಂದರೇಶ್ ಅವರನ್ನು ಒಳಗೊಂಡ ಪೀಠ, ಮೊದಲು ಕೇಂದ್ರ ಹಾಗೂ ರಾಜ್ಯಗಳೆರಡಕ್ಕೂ ಅಧಿಕಾರವಿದೆ ಎಂದು ಹೇಳಿದಿರಿ. ಈಗ ಕೇಂದ್ರಕ್ಕೆ ಅಧಿಕಾರವಿದೆ ಎಂದು ಹೇಳುತ್ತೀರಿ. ಈ ಪ್ರಮಾಣ ಪತ್ರಗಳ ವಿಷಯಗಳೆಲ್ಲವೂ ಸಾರ್ವಜನಿಕರ ಎದುರಿವೆ. ಇವೆಲ್ಲ ತಮ್ಮದೇ ಆದ ಪರಿಣಾಮ ಬೀರುತ್ತವೆ. ಹೀಗಾಗಿ ನೀವು ಎಚ್ಚರಿಕೆಯಿಂದ ಇರಬೇಕು ಎಂದು ತಿಳಿಸಿದೆ.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ರಾಜ್ಯಗಳ ಜೊತೆ ಚರ್ಚೆ ನಡೆಸಿದ ನಂತರ ನಿಲುವು ತಿಳಿಸಲು ಮೂರು ತಿಂಗಳ ಸಮಯ ನೀಡಬೇಕು ಎಂದು ಕೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೀಠ, ಇಂದಿನ ವಿಚಾರಣೆ ಆರಂಭದಲ್ಲಿ ಕಿರಿಯ ವಕೀಲರು ಹಾಜರಾಗಿ ಸಾಲಿಸಿಟರ್ ಜನರಲ್ ಬೇರೆ ನ್ಯಾಯಾಲಯದಲ್ಲಿ (2ನೇ ಪುಟಕ್ಕೆ)

# ಮೂಗಿಗೆ ತುಪ್ಪ ಸವರಬೇಡಿ

## 2ಎ ಮೀಸಲಾತಿ ಒತ್ತಾಯದ ಧರಣಿಯಲ್ಲಿ ಸಿಎಂ ವಿರುದ್ಧ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಅಸಮಾಧಾನ



ರಾಣೇಬೆನ್ನೂರು, ಮೇ 10- ನಮ್ಮ ಪಾದಯಾತ್ರೆ ಸಂದರ್ಭದಲ್ಲಿ ಸಹಾಯ ಮಾಡಿದ್ದೀರಿ. ಮೀಸಲಾತಿಗೆ ಸಂಬಂಧಿಸಿದಂತೆ ಸ್ಪಂದಿಸಿದ್ದೀರಿ. ಈಗ ಮುಖ್ಯಮಂತ್ರಿಗಳಾಗುತ್ತಲೇ ಏಕೆ ಮೌನಿಗಳಾಗಿದ್ದೀರಿ? ಎಂದು ಕೂಡಲ ಸಂಗಮದ ಪಂಚಮಸಾಲಿ ಪೀಠದ ಶ್ರೀ ಜಗದ್ಗುರು ಜಯಮೃತ್ಯುಂಜಯ ಸ್ವಾಮೀಜಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪ್ರಶ್ನಿಸಿದ್ದಾರೆ.

ಪಂಚಮಸಾಲಿ ಸಮಾಜದ ವತಿಯಿಂದ 2ಎ ಮೀಸಲಾತಿಗೆ ಒತ್ತಾಯಿಸಿ ಇಲ್ಲಿನ ತಹಶೀಲ್ದಾರ್ ಕಛೇರಿ ಎದುರು ಮಂಗಳವಾರ ಹಮ್ಮಿಕೊಂಡಿದ್ದ ಸಾಂಕೇತಿಕ ಧರಣಿಯಲ್ಲಿ ಪಾಲ್ಗೊಂಡು ಶ್ರೀಗಳು ಮಾತನಾಡಿದರು.

ನಮ್ಮ ಸಮಾಜದ ಮುಖಂಡರ ಹೆಗಲ ಮೇಲೆ ಕೈಹಾಕುವುದು, ಅವರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದ್ದೀರಿ. ಇದು ಸರಿಯಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.


ನಮಗೆ ಅಥವಾ ಇನ್ನಾರಿಗೋ ಹೇಳಿದ ಮಾತಿನಿಂದ ನೀವು ನುಣುಚಿ ಕೊಳ್ಳಬಹುದು. ಆದರೆ ಯತ್ನಾಳ ಗೌಡರಿಗೆ ಕೊಟ್ಟ ಮಾತಿನಿಂದ ನುಣುಚಿ ಕೊಳ್ಳಲು ಸಾಧ್ಯವಿಲ್ಲ. ಅಧಿವೇಶನದಲ್ಲಿ ತೆಗೆದುಕೊಂಡ ಸಮಯ ಮುಗಿದಿದೆ. ಇನ್ನು ನಮ್ಮ ಹೋರಾಟ ಬೇರೆಯದೇ ರೂಪ ಪಡೆಯಲಿದೆ ಎಂದು ಎಚ್ಚರಿಸಿದರು.

ಹಿಂದಿನ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೊಟ್ಟ ಮಾತು ತಪ್ಪಿದ್ದರಿಂದ ಪಂಚಮಸಾಲಿ ಸಮಾಜ ಅಂತರ ಕಾಯ್ದುಕೊಳ್ಳುತ್ತಿದೆ. ನಿಮ್ಮನ್ನು ಶಾಸಕ, ಮಂತ್ರಿ ಮತ್ತು ಮುಖ್ಯಮಂತ್ರಿ ಮಾಡಿದ್ದು ಪಂಚಮಸಾಲಿ ಸಮಾಜ. ನೀವೂ ಸಹ ಕೊಟ್ಟ ಮಾತು ಈಡೇರಿಸದೇ ಇದ್ದರೆ ಯಡಿಯೂರಪ್ಪನವರಿಗೆ ಆದ ಗತಿ ನಿಮಗೂ ಬರಲಿದೆ ಎಂದು ಕಟುವಾಗಿ ನುಡಿದರು.

ನಮ್ಮ ಮುಂದಿನ ಹೋರಾಟ ಹಾವೇರಿ ಜಿಲ್ಲೆಯಿಂದಲೇ. ಬೊಮ್ಮಾಯಿ ಅವರ ಮನೆ ಮುಂದಿನಿಂದಲೇ ಉಪವಾಸ ಸತ್ಯಾಗ್ರಹದೊಂದಿಗೆ ಪ್ರಾಂಭವಾಗಲಿದೆ. ಶೀಘ್ರದಲ್ಲೇ ರಾಜ್ಯ ಸಂಘದ ಸಭೆ ನಡೆಸಿ ಹೋರಾಟದ ರೂಪುರೇಷೆ ಹಾಗೂ ದಿನಾಂಕ ನಿಗದಿಗೊಳಿಸಲಾಗುವುದು ಎಂದು ಸ್ವಾಮೀಜಿ ಹೇಳಿದರು.

ಧರಣಿಯಲ್ಲಿ ಎ.ಬಿ. ಪಾಟೀಲ, ತಾಲ್ಲೂಕು ಅಧ್ಯಕ್ಷ ಶಿವಪ್ಪ ಗುರಿಕಾರ, ಜಿಲ್ಲಾಧ್ಯಕ್ಷ ಹಾಲಪ್ಪನವರ, ಅರಣ್ಯ ಅಭಿವೃದ್ಧಿ ಮಂಡಳಿ ನಿರ್ದೇಶಕಿ ಭಾರತಿ ಜಂಬಗಿ, ಎಸ್.ಎಸ್. ರಾಮಲಿಂಗಣ್ಣನವರ, ಕೆ (2ನೇ ಪುಟಕ್ಕೆ)

## ಹಸುಳೆಗಳಿಗೆ ರೈಲುಗಳಲ್ಲಿ ವಿಶೇಷ ಬರ್ತ್



ನವದೆಹಲಿ, ಮೇ 10 – ನವಜಾತರೊಂದಿಗೆ ಪ್ರಯಾಣಿಸುವವರಿಗೆ ನೆರವಾಗುವ ಸಲುವಾಗಿ ರೈಲ್ವೆಯು ವಿಶೇಷ ಬರ್ತ್‌ಗಳ ವ್ಯವಸ್ಥೆ ಮಾಡಲು ನಿರ್ಧರಿಸಿದೆ. ಲಖ್ನೌ ಮೇಲ್ ರೈಲಿನಲ್ಲಿ ಪ್ರಾಯೋಗಿಕವಾಗಿ ಈ ಕ್ರಮ ತೆಗೆದುಕೊಳ್ಳಲಾಗುವುದು. ಜನರಿಂದ ಬಂದ ಅಭಿಪ್ರಾಯದ ಆಧಾರದ ಮೇಲೆ ಈ ಯೋಜನೆ ಕೈಗೊಳ್ಳಲಾಗುತ್ತಿದೆ. ನಂತರದಲ್ಲಿ ಇತರೆ ರೈಲುಗಳಿಗೂ ಈ ಯೋಜನೆ ವಿಸ್ತರಿಸಲಾಗುವುದು. ಕೆಳ ಬರ್ತ್‌ಗಳಿಗೆ ಹೊಂದಿಕೊಂಡಂತೆ ಮಗುವಿನ ಬರ್ತ್ ಅಳವಡಿಕೆ ಮಾಡಲಾಗುವುದು. ಜನರು ಬಯಸಿದಾಗ ಈ ಬರ್ತ್ ವ್ಯವಸ್ಥೆ ಮಾಡಲಾಗುವುದು ಎಂದು ರೈಲ್ವೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಮೇ 3ನೇ ವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ

ಬೆಂಗಳೂರು, ಮೇ 10- ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶವನ್ನು ಮೇ ಮೂರನೇ ವಾರ ಪ್ರಕಟ ಮಾಡಲಾಗುತ್ತದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಮೌಲ್ಯಮಾಪನ ಪ್ರಕ್ರಿಯೆ ಮುಕ್ತಾಯವಾಗಿದೆ. ಫಲಿತಾಂಶದ ತಯಾರಿ ಮಾಡಲಾಗುತ್ತಿದೆ. ಮೂರನೇ ವಾರ ಫಲಿತಾಂಶ ಪ್ರಕಟ ಮಾಡುತ್ತೇವೆ. ಶೀಘ್ರವೇ ದಿನಾಂಕ ಪ್ರಕಟ ಮಾಡುತ್ತೇವೆ ಎಂದು ತಿಳಿಸಿದರು.

# ಶ್ರೀಲಂಕಾ : ಮಾಜಿ ಪ್ರಧಾನಿ ನೌಕಾ ನೆಲೆಗೆ ಪಲಾಯನ

**ಗಲಭೆಕೋರರ ಮೇಲೆ ಗುಂಡು ಹಾರಿಸಲು ಸೈನ್ಯಕ್ಕೆ ಆದೇಶ**

ಕೊಲಂಬೊ, ಮೇ 10 – ಶ್ರೀಲಂಕಾದಲ್ಲಿ ಬಿಗುವಿನ ವಾತಾವರಣ ಮುಂದುವರೆದಿದ್ದು, ಗಲಭೆಕೋರರ ಮೇಲೆ ಗುಂಡು ಹಾರಿಸಲು ಸೈನ್ಯಕ್ಕೆ ಆದೇಶ ನೀಡಲಾಗಿದೆ. ಮಾಜಿ ಪ್ರಧಾನ ಮಂತ್ರಿ ಮಹಿಂದ ರಾಜಪಕ್ಷೆ ಅವರನ್ನು ನೌಕಾ ದಳದ ನೆಲೆಯೊಂದಕ್ಕೆ ರವಾನಿಸಲಾಗಿದೆ.

ಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಷೆ ಅವರು ಹಿಂಸಾಚಾರ ನಿಲ್ಲಿಸಲು ಕರೆ ನೀಡಿದ್ದಾರೆ. ಈ ನಡುವೆಯೇ, ಸೈನ್ಯಕ್ಕೆ ಹೆಚ್ಚಿನ ಅಧಿಕಾರ ನೀಡಲಾಗಿದ್ದು, ಖಾಸಗಿ ಆಸ್ತಿಗಳನ್ನು ಶೋಧಿಸುವ ಮತ್ತು ಬಂಧಿತರನ್ನು ಪೊಲೀಸರಿಗೆ ಹಸ್ತಾಂತರಿಸುವ ಮುಂಚೆ 24 ಗಂಟೆಗಳ ಕಾಲ ವಶದಲ್ಲಿಟ್ಟುಕೊಳ್ಳಲು ಅವಕಾಶ ನೀಡಲಾಗಿದೆ.

ಮಹಿಂದ ರಾಜಪಕ್ಷೆ ಪ್ರಧಾನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಪ್ರತಿಭಟನಾಕಾರರಿಗೆ ಸಮಾಧಾನ ತಂದಿಲ್ಲ. ಅಧ್ಯಕ್ಷ ಗೊಟಬಯ ಸಹ ರಾಜೀನಾಮೆ ನೀಡಬೇಕು ಎಂಬ ಒತ್ತಡ ಹೆಚ್ಚಾಗಿದೆ.

ಪ್ರಧಾನ ಮಂತ್ರಿ ಅಧಿಕೃತ ನಿವಾಸದ ಮೇಲೆ ದಾಳಿ ನಡೆದ ನಂತರ ಮಹಿಂದ, ಅವರ ಪತ್ನಿ ಹಾಗೂ ಕುಟುಂಬದವರು ಪಲಾಯನ ಮಾಡಿದ್ದು, ಟ್ರಿಂಕೊಮಲಿ ಬಂದರು ನಗರದ ನೌಕಾ ನೆಲೆಯಲ್ಲಿ ಆಶ್ರಯ ಪಡೆದಿದ್ದಾರೆ.

ನೌಕಾ ನೆಲೆಯಲ್ಲಿ ಮಹಿಂದ ಇರುವ ಸುದ್ದಿ ಹರಡಿದ ನಂತರು, ಪ್ರತಿಭಟನಾಕಾರರು ನೌಕಾ ನೆಲೆಯ ಬಳಿ ತೆರಳಿ ಪ್ರತಿಭಟನೆ ಆರಂಭಿಸಿದ್ದಾರೆ. ಸೋಮವಾರ ನಡೆದ (5ನೇ ಪುಟಕ್ಕೆ)

# ಲೌಡ್‌ಸ್ಪೀಕರ್ ಮಾರ್ಗಸೂಚಿ ಪ್ರಕಟ

**15 ದಿನಗಳಲ್ಲಿ ಅನುಮತಿ ಪಡೆಯುವುದು ಕಡ್ಡಾಯ**

ಬೆಂಗಳೂರು, ಮೇ 10 – ರಾಜ್ಯದಲ್ಲಿ ಲೌಡ್‌ಸ್ಪೀಕರ್‌ಗಳ ಬಳಕೆ ಬಗ್ಗೆ ರಾಜ್ಯ ಸರ್ಕಾರ ಮಾರ್ಗ ಸೂಚಿ ಪ್ರಕಟಿಸಿದ್ದು, ಅನುಮತಿ ಪಡೆಯದ ಲೌಡ್‌ಸ್ಪೀಕರ್‌ಗಳನ್ನು ತೆರವುಗೊಳಿಸಲು ವ್ಯವಸ್ಥೆ ರೂಪಿಸಿದೆ.

ಮಸೀದಿಗಳಲ್ಲಿ ನಿಯಮ ಮೀರಿ ಲೌಡ್‌ಸ್ಪೀಕರ್‌ಗಳನ್ನು ಬಳಸಲಾಗುತ್ತಿದೆ ಎಂದು ಆರೋಪಿಸಿದ್ದ ಶ್ರೀರಾಮ ಸೇನೆ, ರಾಜ್ಯದ ಹಲವಾರು ದೇವಾಲಯಗಳಲ್ಲಿ ಬೆಳಿಗ್ಗೆ ಸುಪ್ರಭಾತ ಮೊಳಗಿಸಿ ಪ್ರತಿಭಟಿಸಿತ್ತು. ಇದರ ಬೆನ್ನಲ್ಲೇ ಸರ್ಕಾರ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಮಾರ್ಗಸೂಚಿ ಪ್ರಕಾರ ಬೆಳಿಗ್ಗೆ 6ರಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಲೌಡ್‌ಸ್ಪೀಕರ್ ಬಳಸಬಹುದು. ರಾತ್ರಿ ವೇಳೆ ಕಟ್ಟಡದ ಒಳಗೆ ಮಾತ್ರ ಸದ್ದು ಬರುವ ರೀತಿಯಲ್ಲಿ ನಿಯಮಗಳಿಗೆ ಅನುಗುಣವಾಗಿ ಲೌಡ್‌ಸ್ಪೀಕರ್ ಬಳಸಬೇಕು.

ಲೌಡ್‌ಸ್ಪೀಕರ್ ಬಳಸುವವರು 15 ದಿನಗಳ ಒಳಗೆ ನಿಯೋಜಿತ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕು. ಲೌಡ್‌ಸ್ಪೀಕರ್ ಅನುಮತಿಗಾಗಿ ವಿವಿಧ ಹಂತಗಳಲ್ಲಿ ಸಮಿತಿಗಳನ್ನು ರಚಿಸಲಾಗುವುದು. ಅನುಮತಿ ಪಡೆಯದ ಲೌಡ್‌ಸ್ಪೀಕರ್‌ಗಳನ್ನು ಸಮಿತಿ ತೆರವುಗೊಳಿಸಲಿದೆ.

ಪೊಲೀಸ್ ಕಮೀಷನರೇಟ್ ವಲಯಗಳಲ್ಲಿ ಎ.ಸಿ.ಪಿ., ನಗರ ಪಾಲಿಕೆ ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ಮಾಲಿನ್ಯ (5ನೇ ಪುಟಕ್ಕೆ)

## ಪೊಲೀಸ್ ಕಣ್ಗಾವಲಿನಲ್ಲಿ ಶಿಕ್ಷಕರ ನೇಮಕಾತಿ ಪರೀಕ್ಷೆ

**ಮೇ 21-22 ರಂದು ಲಕ್ಷ ಅಭ್ಯರ್ಥಿಗಳಿಗೆ ಪರೀಕ್ಷೆ**

ಬೆಂಗಳೂರು, ಮೇ 10 - ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 15 ಸಾವಿರ ಶಿಕ್ಷಕರ ನೇಮಕಾತಿ ಪರೀಕ್ಷೆಯು, ಪೊಲೀಸ್ ಕಣ್ಣಗಾವಲಿನಲ್ಲಿ ನಡೆಯಲಿದೆ.

ಮೇ 21 ಮತ್ತು 22 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ರಾಜ್ಯಾದ್ಯಂತ 435 ಕೇಂದ್ರಗಳಲ್ಲಿ 1.06 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಭಾರೀ ಭ್ರಷ್ಟಾಚಾರ ಮತ್ತು ಹಗರಣದಿಂದ ಎಚ್ಚೆತ್ತ ಸರ್ಕಾರ ಈ ಪರೀಕ್ಷೆಯನ್ನು ಪೊಲೀಸ್ (2ನೇ ಪುಟಕ್ಕೆ)

# ದಾನ-ದಾಸೋಹಗಳಿಂದ ಪುಣ್ಯ ಪ್ರಾಪ್ತಿ



**ಶ್ರೀ ಅಭಿನವ ಬ್ರಹ್ಮಾನಂದ ಗುರೂಜಿ**

ದಾವಣಗೆರೆ, ಮೇ 10 – ಜನರು ಸುಖವನ್ನು ಹೊರ ಜಗತ್ತಿನಲ್ಲಿ, ಹಣ, ಬೆಳ್ಳಿ - ಬಂಗಾರಗಳಲ್ಲಿ ಹುಡುಕುತ್ತಿದ್ದಾರೆ. ಆದರೆ, ಬಾಹ್ಯ ಜಗತ್ತಿನಲ್ಲಿ ಸುಖ ಸಿಗುವುದಿಲ್ಲ. ಸಮರ್ಪಣೆ ಹಾಗೂ ದಾನದಿಂದ ಸುಖ ಸಿಗಲು ಸಾಧ್ಯ ಎಂದು ಬೆಳಗಾವಿಯ ಶ್ರೀ ಅಭಿನವ ಬ್ರಹ್ಮಾನಂದ ಗುರೂಜಿ ತಿಳಿಸಿದ್ದಾರೆ.

ನಗರದ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಇಂದು ಆಯೋಜಿಸಲಾಗಿದ್ದ ಧ್ಯಾನ ಮತ್ತು ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಹಣ ಹೊಂದಿದರೆ, ಮನೆ ಕಟ್ಟಿದರೆ, ಐಷಾರಾಮ ಹೊಂದಿದರೆ ಸುಖ ಸಿಗಬಹುದು ಎಂದು ಅಂದುಕೊಂಡಿದ್ದರೆ ಹುಸಿಯಾಗುತ್ತದೆ. ಬಾಹ್ಯ ಜಗತ್ತಿನ ಎಲ್ಲವನ್ನು ಹೊಂದಿದ ನಂತರವೂ ಸುಖ ಸಿಗದು. ಅಂತರಂಗವನ್ನು ಅರಿತು ಆನಂದವಾಗಿ ದೇವರ ನಾಮಸ್ಮರಣೆ ಹಾಗೂ ಧ್ಯಾನ (2ನೇ ಪುಟಕ್ಕೆ)






# ಮಕ್ಕಳಲ್ಲಿ ಕನ್ನಡಾಭಿಮಾನ ಬೆಳೆಸಬೇಕು



ಚನ್ನಗಿರಿ ಕರವೇ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ಕೋರಿ

ಚನ್ನಗಿರಿ, ಮೇ 10 - ಹರಿದು ಹಂಚಿ ಹೋಗಿದ್ದ ನಮ್ಮ ಕನ್ನಡ ನಾಡನ್ನು ಏಕೀಕರಣ ಚಳವಳಿಯ ಮೂಲಕ ಒಂದುಗೂಡಿಸಿದ್ದ ಮಹಾತ್ಮರ ಹೋರಾಟಗಳ ತತ್ವ ಮತ್ತು ಆದರ್ಶಗಳನ್ನು ಶಾಲಾ-ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ತಿಳಿಸುವ ಮೂಲಕ ಅವರಲ್ಲಿ ಕನ್ನಡಾಭಿಮಾನವನ್ನು ಬೆಳೆಸಬೇಕಾಗಿದೆ ಎಂದು ಚನ್ನಗಿರಿ ಕರವೇ ಮಹಿಳಾ ಘಟಕದ ಅಧ್ಯಕ್ಷರಾದ ಜ್ಯೋತಿ ಕೋರಿ ತಿಳಿಸಿದರು.

ಪಟ್ಟಣದ ಗಂಗಾ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ದತ್ತಿ ಉಪ ನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ಮಕ್ಕಳಲ್ಲಿ ನಾಡಿನ ನೆಲ ಜಲ ಭಾಷೆಯ ಬಗ್ಗೆ ಅಭಿಮಾನವನ್ನು ಬೆಳೆಸಲು ಪೂರಕವಾಗಿವೆ ಎಂದು ಹೇಳಿದರು.

ಜಿಲ್ಲಾ ಜನ ಜಾಗೃತಿ ವೇದಿಕೆಯ ಅಧ್ಯಕ್ಷ ಎಂ.ಬಿ. ನಾಗರಾಜ್ ಕಾಕನೂರು ಮಾತನಾಡಿ, ಸಮಾಜದ ವಾಸ್ತವತೆಯ ಬಗ್ಗೆ ಬೆಳಕು ಚೆಲ್ಲುವ ಸಾಹಿತ್ಯವನ್ನು ವಚನಕಾರರ ವಚನಗಳಲ್ಲಿ ಕಾಣಬಹುದು ಎಂದು ತಿಳಿಸಿದರು. ಬಸವಣ್ಣ, ಅಲ್ಲಮಪ್ರಭು ಮತ್ತು ಸರ್ವಜ್ಞರ ವಚನಗಳು ಸಾರ್ವಕಾಲಿಕವಾದವುಗಳು. ಅಂತಹ ಸಾಹಿತ್ಯ ಪ್ರಕಾರಗಳು ನಮ್ಮಲ್ಲಿ ಹುಟ್ಟಿ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಬೇಕಾಗಿದೆ.

12ನೇ ಶತಮಾನದ ವಚನಕಾರರ ವಿಚಾರಧಾರೆಗಳನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿ ಸಮಾಜದ ಮೇಲೆ ಬೆಳಕು ಚೆಲ್ಲುವ ಅಗತ್ಯವಿದೆ ಎಂದು ಹೇಳಿದರು. ಕನ್ನಡ ಪರಿಚಾರಕ ಜಿ.ಚಿನ್ನಸ್ವಾಮಿ ಮಾತನಾಡಿ, ಶಾಂತವೇರಿ ಗೋಪಾಲಗೌಡ್ರು, ಜೆ.ಹೆಚ್.ಪಟೇಲ್, ಜಯಪ್ರಕಾಶ್ ನಾರಾಯಣರಂತಹ ಮಹಾತ್ಮರ ಸಮಾಜವಾದದ ತತ್ವಾದರ್ಶಗಳನ್ನು ಅನುಸರಿಸಬೇಕಾಗಿದೆ ಎಂದರು.

ಸಾಮಾಜಿಕ ಕಾರ್ಯಕರ್ತ ರಾಕೇಶ್ ಪಾಂಡೆ ಮಾತನಾಡಿ, ಇಂದಿನ ನವಪೀಳಿಗೆಯಲ್ಲಿ ಕನ್ನಡ ನಾಡಿನ ನೆಲ,ಜಲ,ಭಾಷೆ ಹಾಗೂ ಪರಂಪರೆಗಳ ಬಗ್ಗೆ ಅಭಿಮಾನ ಕಡಿಮೆಯಾಗುತ್ತಿರುವುದು ವಿಷಾದದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ಅಧ್ಯಕ್ಷತೆ ವಹಿಸಿದ್ದರು. ನಿಕಟಪೂರ್ವ ಕಸಾಪ ಅಧ್ಯಕ್ಷ ಎಂ.ಯು.ಚನ್ನಬಸಪ್ಪ, ಕೋಶಾಧ್ಯಕ್ಷ ಬಿ.ಈ.ಸಿದ್ದಪ್ಪ, ಪಿ.ಓಂಕಾರಮೂರ್ತಿ, ಮುಖಂಡ ಶಿವಲಿಂಗಪ್ಪ ಮರವಂಜಿ ಮತ್ತಿತರರು ಇದ್ದರು.

# ಹರಿಹರ : ನಾಳೆ ಬಿ.ಪಿ. ಹರೀಶ್ ಜನ್ಮದಿನ




ಹರಿಹರ, ಮೇ 10- ಮಾಜಿ ಶಾಸಕ ಬಿ.ಪಿ. ಹರೀಶ್ ಅವರ ಅಭಿಮಾನಿಗಳ ಬಳಗ ಮತ್ತು ಬಿಜೆಪಿ ಕಾರ್ಯಕರ್ತರ ಸಹಯೋಗದೊಂದಿಗೆ ಮಾಜಿ ಶಾಸಕ ಬಿ.ಪಿ. ಹರೀಶ್ ಅವರ ಹುಟ್ಟು ಹಬ್ಬವನ್ನು ನಗರದ ಸಿದ್ದೇಶ್ವರ ಪ್ಯಾಲೇಸ್ ಆವರಣದಲ್ಲಿ ನಾಡಿದ್ದು ದಿನಾಂಕ 12 ರ ಗುರುವಾರ ಹಮ್ಮಿಕೊಳ್ಳಲಾಗಿದೆ ಎಂದು ನಗರಸಭೆ ಮಾಜಿ ಸದಸ್ಯ ರಾಜು ರೋಖಡೆ ತಿಳಿಸಿದರು.

ನಗರದ ಪತ್ರಿಕಾ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗುರುವಾರ ಮಧ್ಯಾಹ್ನ 3 ಗಂಟೆಗೆ ನಗರದ ಮುಖ್ಯ ರಸ್ತೆಯ ಕಸಬಾ ಗ್ರಾಮದೇವತೆ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಸಂಜೆ 4 ಗಂಟೆಗೆ ಸಿದ್ದೇಶ್ವರ ಪ್ಯಾಲೇಸ್ ಆವರಣದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮವನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟನೆ ಮಾಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಬಿಜೆಪಿ ಹಿರಿಯ ಮುಖಂಡ ಎನ್.ಜಿ. ನಾಗನಗೌಡ್ರು ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ. ವೈ. ವಿಜಯೇಂದ್ರ, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ, ಶಾಸಕರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ ಲಿಂಗಣ್ಣ, ಕರುಣಾಕರ ರಡ್ಡಿ, ಪರಿಷತ್ ಸದಸ್ಯ ಕೆ.ಎಸ್. ನವೀನ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಸೇರಿದಂತೆ, ಇತರೆ ಮುಖಂಡರು ಆಗಮಿಸಲಿದ್ದಾರೆ.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ಹನುಮಂತಪ್ಪ, ಬೆಳ್ಳೂಡಿ ಬಕ್ಕೇಶ್, ಬಾತಿ ಚಂದ್ರಶೇಖರ್, ಐರಣಿ ನಾಗರಾಜ್, ಕೆಂಚನಹಳ್ಳಿ ಮಹಾಂತೇಶಪ್ಪ, ಹೆಚ್. ಮಂಜಾನಾಯ್ಕ್, ತಿಪ್ಪೇಸ್ವಾಮಿ, ಸುನಿಲ್ ಮತ್ತಿತರರು ಹಾಜರಿದ್ದರು.

# ದಾನ-ದಾಸೋಹಗಳಿಂದ ಪುಣ್ಯ ಪ್ರಾಪ್ತಿ

**(1ನೇ ಪುಟದಿಂದ)** ಕೈಗೊಂಡು, ಜ್ಞಾನವನ್ನು ದೈವಕ್ಕೆ ಅರ್ಪಣೆ ಮಾಡುವ ಮೂಲಕ ಸುಖ ಕಂಡುಕೊಳ್ಳಲು ಸಾಧ್ಯ ಎಂದು ಶ್ರೀಗಳು ಹೇಳಿದರು.

ಧರ್ಮ ಮಾರ್ಗದಲ್ಲಿ ನಡೆಯುವುದು ಹಾಗೂ ಪುಣ್ಯ ಸಂಪಾದನೆ ಮಾಡುವುದು ಜೀವನವನ್ನು ಸಂಜೀವನಗೊಳಿಸುತ್ತದೆ.

ಪುಣ್ಯದ ಹಾದಿಯಲ್ಲಿ ನಡೆದಾಗ ಸಂತೃಪ್ತಿ ಹಾಗೂ ಸಂತೋಷ ದೊರೆಯುತ್ತದೆ. ದಾಸೋಹ ಹಾಗೂ ದಾನಗಳನ್ನು ಕೈಗೊಳ್ಳುವುದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಆಜೀವ ಅಧ್ಯಕ್ಷ ಆರ್. ಜಿ. ನಾಗೇಂದ್ರ ಪ್ರಕಾಶ್ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಸಂಘದ ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ಹಾಗೂ ಹಿರಿಯ ಪಿರಮಿಡ್ ಮಾಸ್ಟರ್ ಕೆ.ಜಿ. ಮಾರುತಿ ರಾಂ ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಪುರೋಹಿತರಾದ ನಿರಂಜನ್ ಅವರು ವೇದ ಘೋಷ ನೆರವೇರಿಸಿದರು.


## ಪುಣ್ಯಸ್ಮರಣೆ



ಜನನ : 05.05.1942

ನಿಧನ : 11.05.2021

**ಲಿಂ|| ಶರಣ ಮರಿಯಪ್ಪ ಹನುಮಂತಪ್ಪ**

ಚಿಕ್ಕವ್ವನಾಗ್ತಿಹಳ್ಳಿ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಶ್ರೀಮತಿ ಅನುಸೂಯಮ್ಮ ಹನುಮಂತಪ್ಪ ಚಿಕ್ಕವ್ವನಾಗ್ತಿಹಳ್ಳಿ
ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಮೊಮ್ಮಕ್ಕಳು, ಮರಿಮೊಮ್ಮಕ್ಕಳು.

**ಮರಿಯಪ್ಪ ವಂಶಸ್ಥರು ಹಾಗೂ ಬಂಧು-ಮಿತ್ರರು**


## ಉಲ್ಬಾ ಹೊಡೆದ ಕೇಂದ್ರಕ್ಕೆ ತರಾಟೆ

**(1ನೇ ಪುಟದಿಂದ)** ವ್ಯಸ್ತರಾಗಿರುವುದರಿಂದ ವಿಚಾರಣೆ ಮುಂದೂಡಬೇಕೆಂದು ಹೇಳಿದರು. ಕೇಂದ್ರ ಸರ್ಕಾರ ಏನು ಮಾಡಬೇಕೆಂದು ಹೊರಟಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಈ ಬಗ್ಗೆ ಮುಂಚೆಯೇ ಯೋಚಿಸಬೇಕಿತ್ತು. ಇದರಿಂದ ಅನಿಶ್ಚಿತತೆ ಉಂಟಾಗುತ್ತದೆ. ಈ ವಿಷಯಗಳು ನಮ್ಮ ಎದುರು ಬರುವ ಮೊದಲೇ ಸಾರ್ವಜನಿಕ ವಲಯಕ್ಕೆ ಬರುತ್ತವೆ. ಇವು ಮತ್ತಷ್ಟು ಸಮಸ್ಯೆಗಳಿಗೆ ಕಾರಣವಾಗುತ್ತವೆ ಎಂದು ಪೀಠ ಹೇಳಿತು.

ರಾಜ್ಯಗಳ ಜೊತೆ ಚರ್ಚಿಸಲು ಕೇಂದ್ರ ಸರ್ಕಾರ ಬಯಸುವುದಾದರೆ ಚರ್ಚಿಸಿ. ನಿಮಗೆ ಯಾರು ತಡೆಯುತ್ತಿದ್ದಾರೆ? ಈ ವಿಷಯಗಳ ಬಗ್ಗೆ ನಿರ್ಣಯದ ಅಗತ್ಯವಿದೆ. ಬೇರೆ ಬೇರೆ ನಿಲುವು ತಳೆಯುವುದು ಉಪಯುಕ್ತವಲ್ಲ. ಚರ್ಚೆ ನಡೆಸುವುದಿದ್ದರೆ, ಪ್ರಮಾಣ ಪತ್ರ ದಾಖಲಿಸುವ ಮುಂಚೆಯೇ ನಡೆಸಬೇಕಿತ್ತು ಎಂದು ನ್ಯಾಯಾಲಯ ತಿಳಿಸಿದೆ.

# ರಾಜನಹಳ್ಳಿ ಶ್ರೀಗಳ ಧರಣಿ ಬೆಂಬಲಿಸಿ ಹರಿಹರದಲ್ಲಿ 20ಕ್ಕೆ ಬೃಹತ್ ಮೆರವಣಿಗೆ



ಹರಿಹರ ಮೇ 10- ನಿವೃತ್ತ ನ್ಯಾಯಾಧೀಶರಾದ ನಾಗಮೋಹನ್ ದಾಸ್ ಆಯೋಗದ ವರದಿಯನ್ನು (ಎಸ್ಸಿ - ಎಸ್ಟಿ ಮೀಸಲಾತಿ ಹೆಚ್ಚಳ) ಅನುಷ್ಠಾನ ಗೊಳಿಸುವಂತೆ ಒತ್ತಾಯಿಸಿ, ರಾಜನಹಳ್ಳಿ ಶ್ರೀಗಳು ನಡೆಸುತ್ತಿರುವ ಧರಣಿ ಸತ್ಯಾಗ್ರಹ 90 ನೇ ದಿನಕ್ಕೆ ಕಾಲಿಟ್ಟಿದ್ದರೂ ಸಹ ಸರ್ಕಾರ ಸ್ಪಂದಿಸದಿರುವುದನ್ನು ಖಂಡಿಸಿ, ನಗರದಲ್ಲಿ ಇದೇ ದಿನಾಂಕ 20 ರಂದು ಎಸ್ಸಿ-ಎಸ್ಟಿ ಸಮಾಜಗಳ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ.

ಈ ಕುರಿತು ಮಂಗಳವಾರ ಇಲ್ಲಿನ ಕಾಳಿದಾಸ ನಗರದಲ್ಲಿರುವ ಸಾರ್ವಜನಿಕ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಎಸ್ಸಿ-ಎಸ್ಟಿ ಸಮಾಜಗಳ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು.

ಈ ಪ್ರತಿಭಟನೆ ಹರಿಹರ ನಗರದಲ್ಲಿ ಮಾತ್ರ ನಡೆಯುತ್ತಿಲ್ಲ. ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಏಕಕಾಲದಲ್ಲಿ ನಡೆಯಲಿದೆ ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜನಹಳ್ಳಿ ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ ತಿಳಿಸಿದರು.

ಮೀಸಲಾತಿ ಹೆಚ್ಚಳ ಮಾಡುವ ಭರವಸೆ ನೀಡಿದ್ದ ಯಡಿಯೂರಪ್ಪ ಅವರು ಇದುವರೆಗೂ ಈ ಬಗ್ಗೆ ಮಾತನಾಡಿಲ್ಲ. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಸಹ ಶ್ರೀಗಳನ್ನು ಭೇಟಿ ಮಾಡಿಲ್ಲ. ಸರ್ಕಾರದ ಈ ನಿರ್ಲಕ್ಷ್ಯವನ್ನು ಖಂಡಿಸಿ, ದಿನಾಂಕ 20 ರಂದು ರಾಜ್ಯವ್ಯಾಪಿ ಪ್ರತಿಭಟನೆಗೆ ರಾಜ್ಯಮಟ್ಟದಲ್ಲಿ ತೀರ್ಮಾನಿಸಲಾಗಿದೆ ಎಂದು ಹರಿಹರ ತಾ. ನಾಯಕ ಸಮಾಜದ ಅಧ್ಯಕ್ಷ ಜಿಗಳಿಯ ಕೆ.ಆರ್. ರಂಗಪ್ಪ ತಿಳಿಸಿದರು.

ಪ್ರತಿ ಹಳ್ಳಿಯಿಂದಲೂ ಪ್ರತಿಭಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಎಸ್ಸಿ-ಎಸ್ಟಿ ಜನರನ್ನು ಕರೆತರುವ ಜವಾಬ್ದಾರಿಯನ್ನು ಆಯಾ ಊರಿನ ಮುಖಂಡರಿಗೆ ನೀಡಲಾಗಿದೆ ಎಂದು ನಾಯಕ ಸಮಾಜದ ಹರಿಹರ ನಗರ ಅಧ್ಯಕ್ಷ ಕೆ.ಬಿ.ಮಂಜುನಾಥ್ ಹೇಳಿದರು.

ಸಭೆಯಲ್ಲಿ ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಗರಸಭೆ ಸದಸ್ಯ ದಿನೇಶ್ ಬಾಬು, ವಕೀಲ ಮಾರುತಿ ಬೇಡರ್, ಶಿಕ್ಷಕ ವಾಸನದ ಮಹಾಂತೇಶ್, ಜಿಗಳಿಯ ಜಿ. ಆರ್.ನಾಗರಾಜ್, ಉಕ್ಕಡಗಾತ್ರಿ ರಾಮಪ್ಪ, ಮುಖಂಡರಾದ ಪಾಂಡುರಂಗಪ್ಪ, ಜಿಗಳಿಯ ಹೆಚ್.ಟಿ.ರಂಗನಾಥ್, ಕೆ.ಜಿ.ಬಸವರಾಜ್, ದೊಡ್ಡಘಟ್ಟದ ಮಂಜುನಾಥ್, ಮಹಿಳಾ ಮುಖಂಡರಾದ ಪಾರ್ವತಿ, ಗೀತಮ್ಮ ಕೆ. ಬೇವಿನಹಳ್ಳಿ ಹಾಲೇಶ್, ಬಿಳಸನೂರು ನಾಗರಾಜ್, ಹಂಚಿನ ದೇವೇಂದ್ರಪ್ಪ, ಮಕರಿ ಪಾಲಾಕ್ಷಪ್ಪ, ರಾಜು, ಸಲಗನಹಳ್ಳಿ ವಿಜಯ್, ರಾಜನಹಳ್ಳಿ ಭೀಮಣ್ಣ, ಮೆಣಸಿನಹಾಳ್ ಬಸವರಾಜ್, ಪತ್ರಕರ್ತ ಜಿಗಳಿ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಮಲೇಬೆನ್ನೂರಿನ ನಾಡ ಕಚೇರಿಯಲ್ಲಿ ಬಸವ ಜಯಂತಿ



ಮಲೇಬೆನ್ನೂರು, ಮೇ 10- ಇಲ್ಲಿನ ಪುರಸಭೆ ನಾಡಕಛೇರಿ, ಪೊಲೀಸ್ ಠಾಣೆ, ಸಮುದಾಯ ಆರೋಗ್ಯ ಕೇಂದ್ರ, ಲಯನ್ಸ್ ಕ್ಲಬ್, ನೀರಾವರಿ ಇಲಾಖೆಯ ಕಛೇರಿಯಲ್ಲಿ ಮಹಾ ಮಾನವತಾವಾದಿ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.


ಪುರಸಭೆ ಹಾಗೂ ನಾಡ ಕಛೇರಿಯ ಸಹಭಾಗಿತ್ವದಲ್ಲಿ ನಡೆದ ಜಯಂತಿಯಲ್ಲಿ ಉಪ ತಹಶೀಲ್ದಾರ್ ಆರ್.ರವಿ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ದೊಡ್ಡಮನಿ, ಪುರಸಭೆ ಸದಸ್ಯ ಬೆಣ್ಣೆಹಳ್ಳಿ ಸಿದ್ದೇಶ್, ಟಿ. ಹನುಮಂತಪ್ಪ, ಬಿ.ಮಂಜುನಾಥ್, ಬೋವಿ ಶಿವು, ಗೌಡ್ರ ಮಂಜಣ್ಣ, ಎ.ಕೆ ಲೋಕೇಶ್, ಮುಖಂಡ ಕೆ.ಪಿ. ಗಂಗಾಧರ್, ಭೋವಿ ಕುಮಾರ್, ಕೆ.ಜಿ. ಪರಮೇಶ್ವರಪ್ಪ, ಹುಳ್ಳಳ್ಳಿ ಸಿದ್ಧೇಶ್, ಜಿಗಳೇರ ಹಾಲೇಶಪ್ಪ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಅಣ್ಣಪ್ಪ, ಬೋರಯ್ಯ, ಆನಂದ್ ತೀರ್ಥ, ನಾಡ ಕಛೇರಿಯ ಪುಷ್ಪ ಹಿರೇಮಠ, ಬಸವರಾಜ ಮಾರುತಿ, ಜಿಗಳಿ ರಂಗನಾಥ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಹರಿಹರದಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ



ಹರಿಹರ, ಮೇ 10- ತಾಲ್ಲೂಕು ಆಡಳಿತ ವತಿಯಿಂದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರೇಡ್ -2 ತಹಶೀಲ್ದಾರ್ ಬಿ.ಎಂ. ಶಶಿಧರಯ್ಯ, ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಬಿ.ಹೆಚ್. ಹನುಮಂತರಡ್ಡಿ, ಗ್ರಾ.ಪಂ ಸದಸ್ಯರಾದ ಗಿರಿಗೌಡರು, ವಿಷ್ಣುರಡ್ಡಿ, ಬಸಪ್ಪರಡ್ಡಿ ಮಣಕೂರು, ಪ್ರಕಾಶ ಬೇತೂರು, ಶಿಕ್ಷಕರುಗಳಾದ ಎ.ಶಿವಪ್ಪ, ಟಿ.ಹೆಚ್. ಹನುಮರಡ್ಡೇರ್, ಶ್ರೀನಿವಾಸ ರಡ್ಡಿ, ಹೆಚ್.ಪಿ. ಮಲ್ಲಿಕಾರ್ಜುನ ಬಾವಿಕಟ್ಟಿ, ರಾಜಶೇಖರ ರಡ್ಡಿ, ಶಿಕ್ಷಕ ಮಂಜಪ್ಪ ಬಿದರಿ ಉಪಸ್ಥಿತರಿದ್ದರು.

# ಸಂತೂರ್ ಜಾಗತಿಕ ವೇದಿಕೆ ತಂದಿದ್ದ ಶರ್ಮ ಇನ್ನಿಲ್ಲ



ಮುಂಬೈ, ಮೇ 10 – ಸಂತೂರ್ ವಾದ್ಯಕ್ಕೆ ಅಂತರ ರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿದ್ದ ಶಾಸ್ತ್ರೀಯ ಸಂಗೀತಗಾರ ಪಂಡಿತ್ ಶಿವ ಕುಮಾರ್ ಶರ್ಮ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು.

ದೇಶದ ಹೆಸರಾಂತ ಶಾಸ್ತ್ರೀಯ ಸಂಗೀತಗಾರರಲ್ಲಿ ಒಬ್ಬರಾಗಿರುವ ಶರ್ಮ, ಪಾಲಿ ಹಿಲ್‌ನಲ್ಲಿರುವ ತಮ್ಮ ನಿವಾಸದಲ್ಲಿ ಸಾವನ್ನಪ್ಪಿದ್ದಾರೆ ಎಂದು ಅವರ ಕಾರ್ಯದರ್ಶಿ ದಿನೇಶ್ ತಿಳಿಸಿದ್ದಾರೆ.

ಕೊನೆಯ ದಿನದವರೆಗೂ ಅವರು ಸಂಗೀತ ಲೋಕಕ್ಕೆ ಸೇವೆ ಸಲ್ಲಿಸುತ್ತಿದ್ದರು. ಮುಂದಿನ ವಾರವಷ್ಟೇ ಭೂಪಾಲದಲ್ಲಿ ಅವರ ಸಂಗೀತ ಗೋಷ್ಠಿ ನಡೆಯಬೇಕಿತ್ತು.

ಪತ್ನಿ ಮನೋರಮ ಹಾಗೂ ಪುತ್ರ ರಾಹುಲ್ ಅವರನ್ನು ಶರ್ಮ ಅಗಲಿದ್ದಾರೆ. ರಾಹುಲ್ ಸಹ ಸಂತೂರ್ ವಾದಕರಾಗಿದ್ದಾರೆ.

ರಾಷ್ಟ್ರಪತಿ ರಾಮನಾಥ ಕೋವಿಂದ್, ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಗಣ್ಯರು ಶರ್ಮ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. ಸಕಲ ಸರ್ಕಾರಿ ಗೌರವಗಳೊಂದಿಗೆ ಶರ್ಮ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮಹಾರಾಷ್ಟ್ರ ಸರ್ಕಾರ ತಿಳಿಸಿದೆ.

ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಶರ್ಮ, 1938ರಲ್ಲಿ ಜಮ್ಮುವಿನಲ್ಲಿ ಜನಿಸಿದ್ದರು. ಸಂತೂರ್‌ನಲ್ಲಿ ಶಾಸ್ತ್ರೀಯ ಸಂಗೀತ ನುಡಿಸಿದ ಮೊದಲಿಗರು ಶರ್ಮ ಎಂದು ಗುರುತಿಸಲಾಗುತ್ತದೆ. ಸಂತೂರ್ ಜಮ್ಮು ಮತ್ತು ಕಾಶ್ಮೀರದ ಜಾನಪದ ವಾದ್ಯವಾಗಿದೆ.

ಪಂಡಿತ್ ಹರಿ ಪ್ರಸಾದ್ ಚೌರಾಸಿಯ ಜೊತೆಗೂಡಿ ಶರ್ಮ ಅವರು ಹಲವಾರು ಚಿತ್ರಗಳಿಗೆ ಸಂಗೀತ ನೀಡಿದ್ದರು. ಶಿವ - ಹರಿ ಹೆಸರಿನಲ್ಲಿ ಅವರು ಚಿತ್ರಗಳಿಗೆ ಸಂಗೀತ ನೀಡುತ್ತಿದ್ದರು. 'ಸಿಲ್‌ಸಿಲಾ', 'ಲಮ್ಹೆ', 'ಚಾಂದನಿ' ಹಾಗೂ 'ಡರ್' ಅವರು ಸಂಗೀತ ನೀಡಿದ ಹೆಸರಾಂತ ಚಿತ್ರಗಳು. ಶರ್ಮಾ ಅವರು 1986ರಲ್ಲಿ ಸಂಗೀತ ನಾಟಕ ಅಕಾಡೆಮಿ, 1991ರಲ್ಲಿ ಪದ್ಮಶ್ರೀ ಹಾಗೂ 2001ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿ ಪಡೆದಿದ್ದರು.

# ಕಣ್ಗಾವಲಿನಲ್ಲಿ ಶಿಕ್ಷಕರ ನೇಮಕಾತಿ ಪರೀಕ್ಷೆ

**(1ನೇ ಪುಟದಿಂದ)** ಕಣ್ಗಾವಲಿನಲ್ಲಿ ನಡೆಸಲು ತೀರ್ಮಾನಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಬಹಳ ಕಟ್ಟು ನಿಟ್ಟಾಗಿ ನಡೆಸುವ ಉದ್ದೇಶದಿಂದ ಶಿಕ್ಷಣ ಇಲಾಖೆ ಅಧಿಕಾರಿಗಳು ಇಂದು ಪೊಲೀಸ್ ಹಿರಿಯ ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿ, ಕೆಲವು ಕಠಿಣ ತೀರ್ಮಾನ ಕೈಗೊಂಡಿದ್ದಾರೆ.

ಸಭೆಯ ನಂತರ ಈ ವಿಷಯವನ್ನು ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಎಲ್ಲ ಪರೀಕ್ಷಾ ಕೊಠಡಿಗಳಿಗೂ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗುವುದು ಎಂದರು. ನಿರಂತರವಾಗಿ ದೃಶ್ಯಾವಳಿಗಳನ್ನು ವೀಕ್ಷಣೆ ಮಾಡಲು ಅಧಿಕಾರಿಗಳ ತಂಡವನ್ನು ನೇಮಿಸಲಾಗುವುದು ಎಂದೂ ತಿಳಿಸಿದರು. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್, ಕೈಗಡಿಯಾರ ಸೇರಿದಂತೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಸಾಧನ ತರಲು ಅವಕಾಶವಿಲ್ಲ. ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಲೋಹ ಶೋಧಕ ಅಳವಡಿಸಲಾಗುವುದು.

ಅಭ್ಯರ್ಥಿಗಳು ಒಂದು ಗಂಟೆ ಮುನ್ನವೇ ತಮ್ಮ ಕೊಠಡಿಗಳಿಗೆ ತೆರಳಬೇಕು. ಪರೀಕ್ಷಾ ಕೇಂದ್ರ ಪ್ರವೇಶಿಸುವ ಮುನ್ನ ಮೂರು ಹಂತದಲ್ಲಿ ಪೊಲೀಸರು ತಪಾಸಣೆ ಮಾಡಲಿದ್ದಾರೆ. ನಿಗದಿಯಂತೆ ಮೇ 21 ಹಾಗೂ 22 ರಂದು ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು.


## ಶ್ರೀ ಆರ್.ಬಿ.ಹಿರೇಮಠ ನಿಧನ



ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಸ್ಟೇಜ್, 5ನೇ ಸಿ ಕ್ರಾಸ್, ದಾವಣಗೆರೆ ವಾಸಿಯಾದ

**ಶ್ರೀ ಆರ್.ಬಿ.ಹಿರೇಮಠ**

ಇವರು ದಿನಾಂಕ 09.05.2022ರ ಸೋಮವಾರ ರಾತ್ರಿ 11.40 ಕ್ಕೆ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.05.2022ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಗದಗ ಜಿಲ್ಲೆ ರೋಣ ತಾಲ್ಲೂಕು ಇಟಗಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ: ಮೊ: 91108 65792**


## ನಗರದಲ್ಲಿ ಇಂದು ಕಸಾಪ ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ದತ್ತಿ ಉಪನ್ಯಾಸ ಕಾರ್ಯಕ್ರಮವು ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ನಿವೃತ್ತ ಎಸಿಪಿ ಎಂ.ಎನ್. ರುದ್ರಪ್ಪ ಅವರು, ಕೆ.ಎಸ್. ಎಸ್. ಕಾಲೇಜಿನ ಪ್ರಾಂಶುಪಾಲ ಪ್ರೊ. ಬಿ.ಸಿ. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಚಿಂತಕ ಡಾ. ಎ.ಬಿ. ರಾಮಚಂದ್ರಪ್ಪ ಉಪನ್ಯಾಸ ನೀಡಲಿದ್ದು, ಎಂ. ನಿರಂಜನಮೂರ್ತಿ, ಚೌಡಪ್ಪ, ಬಿ. ಮಂಜುನಾಥ ಅವರುಗಳು ಮುಖ್ಯ ಅತಿಥಿಗಳಾಗಿದ್ದಾರೆ. ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

## ಕುರುಹಿನ ಶೆಟ್ಟಿ ಸಮಾಜದ ಹನುಮಂತಪ್ಪ ನಿಧನ



ದಾವಣಗೆರೆ ಕೆಟಿಜೆ ನಗರ 15ನೇ ಕ್ರಾಸ್ ವಾಸಿ, ಕುರುಹಿನ ಶೆಟ್ಟಿ ಸಮಾಜದ ಹಿರಿಯ ಮುಖಂಡರಾದ ಕೊಕ್ಕನೂರು ಹನುಮಂತಪ್ಪ ಪಣೆವರ (89) ಅವರು ದಿನಾಂಕ 10.05.2022ರ ಮಂಗಳವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ನಾಲ್ವರು ಪುತ್ರರು, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.05.2022ರ ಬುಧವಾರ ಮಧ್ಯಾಹ್ನ 1.30ಕ್ಕೆ ಲೇಬರ್ ಕಾಲೋನಿಯ ಆರ್. ಹೆಚ್. ಬೃಂದಾವನದಲ್ಲಿ ನಡೆಯಲಿದೆ.

## ತುಪ್ಪ ಸವರಬೇಡಿ

**(1ನೇ ಪುಟದಿಂದ)** ಶಿವಲಿಂಗಪ್ಪ, ವಿ.ಸಿ.ಪಾಟೀಲ, ನಾಗರಾಜ ಮೋಟಗಿ, ಸಿದ್ದು ಚಿಕ್ಕಬಿದರಿ, ಬಸವರಾಜ ರೊಡ್ಡನವರ, ಸಿ. ಆರ್. ಬಳ್ಳಾರಿ, ಉಮೇಶ್ ಗುಂಡಗಟ್ಟಿ ಮತ್ತಿತರರಿದ್ದರು.

**ಕೋಳಿವಾಡ ಬೆಂಬಲ:** 2ಎ ಮೀಸಲಾತಿಗೆ ಒತ್ತಾಯಿಸಿ ಪಂಚಮಸಾಲಿ ಸಮಾಜ ನಡೆಸುತ್ತಿದ್ದ ಧರಣಿ ಸ್ಥಳಕ್ಕೆ ಆಗಮಿಸಿದ ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ, ತಾಪಂ ಮಾಜಿ ಅಧ್ಯಕ್ಷ ರವೀಂದ್ರಗೌಡ ಪಾಟೀಲ, ಎಪಿಎಂಸಿ ಮಾಜಿ ಅಧ್ಯಕ್ಷ ಸಣ್ಣ ತಮ್ಮಪ್ಪ ಬಾರ್ಕಿ, ಜಿಪಂ ಮಾಜಿ ಸದಸ್ಯ ಕೃಷ್ಣಪ್ಪ ಕಂಬಳಿ ಮೀಸಲಾತಿ ನೀಡುವಂತೆ ಒತ್ತಾಯಿಸಿದರು.

# ವಾಸವಿ ಕನ್ಯಕಾಪರಮೇಶ್ವರಿ ದೇವಿ ಚರಿತ್ರೆ



ಕ್ರಿಸ್ತ ಶಕ 10-11ನೇ ಶತಮಾನದಲ್ಲಿ ಕುಸುಮ ಶ್ರೇಷ್ಠಿ ಎಂಬ ವೈಶ್ಯ ರಾಜನು ಪೆನುಗೊಂಡ ಪ್ರಾಂತ್ಯವನ್ನು ಆಳುತ್ತಿದ್ದ, 18 ಪರಗಣಗಳನ್ನು ಹೊಂದಿದ್ದ ಈ ಪ್ರಾಂತ್ಯವು, ವಿಷ್ಣುವರ್ಧನ ಮಹಾರಾಜನ ಅಧೀನದಲ್ಲಿತ್ತು. ರಾಣಿ ಕುಸುಮಾಂಭೆಯು ಕುಸುಮ ಶ್ರೇಷ್ಠಿ ರಾಜನ ಧರ್ಮಪತ್ನಿ. ಇವರಿಬ್ಬರೂ ಆದರ್ಶ ದಂಪತಿಯಾಗಿ ಪ್ರಶಾಂತ ಜೀವನವನ್ನು ಸಾಗಿಸುತ್ತಿದ್ದರು. ಪರಮೇಶ್ವರನ ಆರಾಧನೆ ಅವರ ದೈನಂದಿನ ಜೀವನದ ಒಂದು ಭಾಗವಾಗಿತ್ತು. ಅವರಿಗೆ ಬಹಳಷ್ಟು ವರ್ಷಗಳ ಕಾಲ ಮಕ್ಕಳಾಗಿರಲಿಲ್ಲ, ರಾಜ್ಯಕ್ಕೆ ವಾರಸುದಾರರು ಇಲ್ಲ ಎಂದು ಚಿಂತಿಸುತ್ತಿದ್ದರು. ಎಷ್ಟೋ ಪೂಜೆಗಳನ್ನು, ವ್ರತಗಳನ್ನು ಕೈಗೊಂಡರೂ ಅವರ ಆಸೆ ಈಡೇರಲಿಲ್ಲ. ಆಗ ಅವರು ತಮ್ಮ ಕುಲಗುರುಗಳಾದ ಭಾಸ್ಕರಾಚಾರ್ಯರನ್ನು ಸಂಪರ್ಕಿಸಲು, ಅವರ ಸಲಹೆಯಂತೆ ದಶರಥ ಮಹಾರಾಜರು ಮಾಡಿದ್ದ ಪುತ್ರಕಾಮೇಷ್ಟಿ ಯಾಗವನ್ನು ಮಾಡಲು ತಿಳಿಸಿದರು. ನಂತರ ಒಂದು ಪವಿತ್ರ ಕಾಲದಲ್ಲಿ ಪುತ್ರಕಾಮೇಷ್ಟಿ ಯಾಗವನ್ನು ಮಾಡಿದರು. ಕುಲದೇವ ಶ್ರೀ ಪರಮೇಶ್ವರನ ಅನುಗ್ರಹದಿಂದ ಅಗ್ನಿದೇವನು ಫಲವನ್ನು ನೀಡಲು, ಭಕ್ತಿ, ಶ್ರದ್ಧೆಯಿಂದ ಆ ಫಲವನ್ನು ಸೇವಿಸಿದ ರಾಣಿ ಕುಸುಮಾಂಭೆಗೆ ಕೆಲವು ಕಾಲದಲ್ಲಿಯೇ ಅಂದರೆ ವೈಶಾಖ ಶುದ್ಧ ದಶಮಿ ಶುಕ್ರವಾರ ಉತ್ತರಾ ನಕ್ಷತ್ರದ ಕನ್ಯಾ ರಾಶಿಯಲ್ಲಿ ರಾಣಿ ಕುಸುಮಾಂಬೆಯು ಅವಳಿ ಮಕ್ಕಳಿಗೆ ಜನ್ಮ ನೀಡಿದರು. ಅವರಲ್ಲಿ ಒಂದು ಗಂಡು ಮಗು ಮತ್ತು ಒಂದು ಹೆಣ್ಣು ಮಗು, ಗಂಡು ಮಗುವಿಗೆ ವಿರೂಪಾಕ್ಷನೆಂದೂ, ಹೆಣ್ಣು ಮಗುವಿಗೆ ವಾಸವಾಂಬ ಎಂದು ನಾಮಕರಣ ಮಾಡಿದರು.

ಬಾಲ್ಯದಲ್ಲಿಯೇ ವಿರೂಪಾಕ್ಷನು ರಾಜನಾಗುವ ಎಲ್ಲಾ ಲಕ್ಷಣಗಳನ್ನು ತೋರಿಸುತ್ತಿದ್ದನು. ವಾಸ ವಿಯು ಕಲೆ, ತರ್ಕ, ವಾಸ್ತುಶಿಲ್ಪ, ಸಂಗೀತದಲ್ಲಿ ಆಸಕ್ತಿ ತೋರುತ್ತಿದ್ದಳು. ಇವರಿಬ್ಬರೂ ವಿದ್ಯಾಭ್ಯಾಸವನ್ನು ತಮ್ಮ ಕುಲಗುರುಗಳಾದ ಭಾಸ್ಕರಾಚಾರ್ಯರಿಂದ ಪಡೆದರು, ವಾಸವಿಯು ತನ್ನ ಸಹೋದರ ವಿರೂಪಾಕ್ಷನೊಡಗೂಡಿ ಆಟ-ಪಾಟಗಳನ್ನಾಡುತ್ತಾ, ದೈವ ಭಕ್ತಳಾಗಿ ಬಾಲ್ಯವನ್ನು ಕಳೆದಳು.

ಯುಕ್ತ ವಯಸ್ಕನಾದ ವಿರೂಪಾಕ್ಷನಿಗೆ ಆಯೇಲೂರಿನ ಅರಧಿ ಶ್ರೇಷ್ಠಿಯವರ ಪುತ್ರಿ ರತ್ನಾವತಿಯೊಂದಿಗೆ ಮದುವೆ ಯಾಯಿತು, ಮದುವೆಯಲ್ಲಿ ಭಾಗವಹಿಸಿದ್ದ ಎಲ್ಲರೂ ವಾಸವಿಯ ಮದುವೆ ಕೂಡಾ ಇಷ್ಟೇ ವೈಭವದಿಂದ ಆಗುವುದೆಂದು ಮಾತನಾಡಿಕೊಂಡರು. ವಾಸವಿಯು ಯೌವನಾವಸ್ಥೆಯಲ್ಲಿದ್ದಾಗ, ಕುಸುಮ ಶ್ರೇಷ್ಠಿಯು ಸಾಮ್ರಾಜ್ಯ ವಿಸ್ತರಣೆಗಾಗಿ ಯುದ್ಧ ಮಾಡಿ ವಾಪಾಸ್ ಹೋಗುತ್ತಿದ್ದ ಸಾಮ್ರಾಟ ವಿಷ್ಣುವರ್ಧನನ್ನು ಪೆನುಗೊಂಡೆಗೆ ಆಥಿತ್ಯ ಸ್ವೀಕರಿಸಲು ಆಹ್ವಾನಿಸಿದನು. ಆಹ್ವಾನ ಸ್ವೀಕರಿಸಿದ ವಿಷ್ಣುವರ್ಧನ ಮಹಾರಾಜನು ಪೆನುಗೊಂಡೆಗೆ ಆಗಮಿಸಿದನು. ಮಹಾರಾಜ ವಿಷ್ಣುವರ್ಧನರನ್ನು ಸನ್ಮಾನಿಸಿ ಗೌರವಿಸಲು ರಾಜಾ ಕುಸುಮ ಶ್ರೇಷ್ಠಿಯು ಮೆರವಣಿಗೆಯನ್ನು ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ವಿಷ್ಣುವರ್ದನ ಮಹಾರಾಜನು ಅಪೂರ್ವ ಸೌಂಧರ್ಯವತಿಯಾದ ವಾಸವಿಯನ್ನು ನೋಡಿದನು. ವಾಸವಿಯ ಸೌಂದರ್ಯ ನೋಡಿ ಮೋಹಿತನಾದ ಮಹಾರಾಜ ವಿಷ್ಣುವರ್ಧನನು, ವಾಸವಿಯನ್ನು ಮದುವೆಯಾಗುವ ಪ್ರಸ್ತಾಪವನ್ನು ತಮ್ಮ ಮಂತ್ರಿಗಳ ಸಂಗಡ ಕಳುಹಿಸಿದನು. ರಾಜಾ ಕುಸುಮ ಶ್ರೇಷ್ಠಿಯು ಕುಲಗುರುಗಳು, ಪುರದ ಹಿರಿಯರೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿದನು. ಈಗಾಗಲೇ ಮದುವೆಯಾಗಿರುವ ವಿಷ್ಣುವರ್ಧನ ರಾಜ, ಅವನ ವಯಸ್ಸು ಹಾಗೂ ಕೆಲವು ವಿಷಯಗಳನ್ನು ಚರ್ಚಿಸಿದ ಹಿರಿಯರು ಇದರ ತೀರ್ಮಾನವನ್ನು ವಾಸವಿಯೇ ತೆಗೆದು ಕೊಳ್ಳಲಿ ಎಂದು ತಿಳಿಸಿದರು ಹಾಗೂ ವಾಸವಿಯ ಮುಂದೆ ವಿಷಯವನ್ನು ಇಟ್ಟರು. ಆರಾಧ್ಯ ಪರಶಿವನನ್ನೇ ಪತಿಯೆಂದು ನಂಬಿದ ವಾಸವಿಯು ಜೀವಿತಾಂತ ಕನ್ಯೆಯಾಗಿರುವ ಹಾಗೂ ಪ್ರಾಪಂಚಿಕ ವಿಷಯಗಳು ತನಗೆ ಸಂಬಂಧವಿಲ್ಲವೆಂದು ತಿಳಿಸಿದಳು. ಈ ವಿಷಯವನ್ನು ವಿಷ್ಣುವರ್ಧನ ಮಹಾರಾಜನಿಗೆ ತಿಳಿಯಪಡಿಸಿದಾಗ ಇದರಿಂದ ಕೋಪಗೊಂಡ ವಿಷ್ಣುವರ್ಧನನು ಬಲವಂತವಾಗಿ ವಾಸವಿಯನ್ನು ಕರೆತರಲು ಪೆನುಗೊಂಡೆಗೆ ತನ್ನ ಸೈನ್ಯವನ್ನು ಕಳುಹಿಸಿದನು. ಯುದ್ಧ ಮತ್ತು ರಕ್ತಪಾತವನ್ನು ತಡೆಗಟ್ಟಿ ಮನುಕುಲಕ್ಕೆ ಶಾಂತಿ, ಸಂದೇಶವನ್ನು ನೀಡುವ ಸಲುವಾಗಿ, ಧರ್ಮವನ್ನು ಬಿಟ್ಟುಕೊಟ್ಟು ಐಹಿಕ ಸುಖಭೋಗಗಳನ್ನು ಅನುಭವಿಸುವುದಕ್ಕಿಂತ ಧರ್ಮ ಸಂರಕ್ಷಣೆಗಾಗಿ ಆತ್ಮಸ್ಥೈರ್ಯದಿಂದ ಅಗ್ನಿ ಪ್ರವೇಶ ಮಾಡಲು ವಾಸವಿಯು ತೀರ್ಮಾನಿಸಿದಳು, ಈ ತೀರ್ಮಾನ ಕೇಳಿ ಪುರದ 102 ಗೋತ್ರದ ದಂಪತಿಗಳು ವಾಸವಿಯ ಜೊತೆ ಅಗ್ನಿ ಪ್ರವೇಶ ಮಾಡಲು ತೀರ್ಮಾನಿಸಿದರು. ವಾಸವಿಯ ಸಲಹೆಯಂತೆ ಗೋದಾವರಿ ನದಿ ದಡದ ಪೆನುಗೊಂಡ ಎನ್ನುವ ಸ್ಥಳದಲ್ಲಿ ಸೈನಿಕರು 103 ಅಗ್ನಿ ಕುಂಡಗಳನ್ನು ನಿರ್ಮಿಸಿದರು. ವಾಸವಿಯನ್ನು ಭಗವತ್ ಸ್ವರೂಪಿಣಿ ಎಂದು ನಂಬಿದ್ದ 102 ಗೋತ್ರದವರು ವಾಸವಿಯ ನಿಜ ರೂಪ ದರ್ಶಿಸುವಂತೆ ಕೋರಿದರು. ವಾಸವಿಯು ದೇದೀಪ್ಯವಾದ ಪ್ರಭೆಯೊಂದಿಗೆ ತನ್ನ ವಿಶ್ವಸ್ವರೂಪವನ್ನು ತೋರಿಸಿ, ತಾನು ಆದಿ ಪರಾಶಕ್ತಿ, ಮಹಾದೇವಿಯ ಅಂಶವೆಂದು ತಿಳಿಸಿದಳು, ತಾನು ಧರ್ಮವನ್ನು ರಕ್ಷಿಸಲು ಮತ್ತು ಸ್ತ್ರೀಯರ ಆತ್ಮ ಗೌರವವನ್ನು ಎತ್ತಿ ಹಿಡಿಯಲು, ವಿಷ್ಣುವರ್ಧನನ್ನು ಅಂತ್ಯ ಮಾಡಲು, ವೈಶ್ಯರ ಔದಾರ್ಯವನ್ನು ಪ್ರಪಂಚಕ್ಕೆ ತಿಳಿಸಲು ಜನ್ಮ ತಳೆದಿದ್ದೇನೆ ಎಂದು ತಿಳಿಸಿದಳು. ನಂತರ ಮಾನವ ರೂಪಕ್ಕೆ ಮರಳಿದ ವಾಸವಿಯೊಂದಿಗೆ 102 ಗೋತ್ರದ ದಂಪತಿಗಳೂ ಅಗ್ನಿಪ್ರವೇಶ ಮಾಡಿದರು. ಈ ವಿಷಯವನ್ನು ತಿಳಿದ ವಿಷ್ಣುವರ್ಧನನು ಅಗ್ನಿ ಪ್ರವೇಶ ಮಾಡಿದ ಸ್ಥಳಕ್ಕೆ ಧಾವಿಸಿ ಅಲ್ಲಿನ ದೃಶ್ಯವನ್ನು ವೀಕ್ಷಿಸಿ ರಕ್ತಕಾರಿಕೊಂಡು ಮರಣ ಹೊಂದಿದನು. ಹಿಂದಿನ ಜನ್ಮದಲ್ಲಿ ಶಾಪಗ್ರಸ್ತನಾಗಿದ್ದ ಗಂಧರ್ವ ಚಿತ್ರಕಂಠನು ಈ ಜನ್ಮದಲ್ಲಿ ವಿಷ್ಣುವರ್ಧನನಾಗಿ ಜನ್ಮ ತಳೆದಿದ್ದನು, ವಾಸವಿಯು ಅವನನ್ನು ಶಾಪ ವಿಮೋಚನೆಗೊಳಿಸಿದಳು. ಆತ್ಮ ಮಹಾತ್ಯಾಗದಿಂದ ಅಗ್ನಿ ಪ್ರವೇಶ ಮಾಡಿದ ವಾಸವಿಯು ತನ್ನ ವಿಶ್ವರೂಪ ದರ್ಶನವನ್ನು ತೋರಿಸಿ, ಆರ್ಯವೈಶ್ಯರಿಗೆ ದೇಶ ಭಕ್ತಿ, ಸತ್ಯ, ನಿಷ್ಠೆ, ತ್ಯಾಗ, ಅಹಿಂಸೆಗಳನ್ನ ಅವರ ಜೀವನದಲ್ಲಿ ಪಾಲಿಸಲು ಬೋಧಿಸಿ ಅವರ ಕುಲದೇವತೆಯಾದಳು.



**- ಆರ್. ಎಲ್. ಪ್ರಭಾಕರ್,**
ಅಧ್ಯಕ್ಷರು, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘ, ದಾವಣಗೆರೆ.

# ಜನನ ದರ ಕುಸಿತ : ಜಪಾನ್ ಹಾದಿಗೆ ಹೊರಟ ಭಾರತ



ಎಸ್.ಎ. ಶ್ರೀನಿವಾಸ್, ದಾವಣಗೆರೆ.

> ಜನಸಂಖ್ಯೆ ಕಡಿಮೆ ಮಾಡುವ ದಿಕ್ಕಿನಲ್ಲಿ ಸರ್ಕಾರಗಳು ಸಕಾರಾತ್ಮಕ ಕ್ರಮ ತೆಗೆದುಕೊಳ್ಳಲಿಲ್ಲ. ಆದರೆ, ಜನನ ದರ ಹೆಚ್ಚಿಸುವ ದಿಕ್ಕಿನಲ್ಲಿ ಸಕಾರಾತ್ಮಕ ಕ್ರಮ ತೆಗೆದುಕೊಳ್ಳುವ ಅನಿವಾರ್ಯತೆ ಇದೆ. ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳದೇ ಹೋದರೆ, ಮುಂದಿನ ದಶಕಗಳಲ್ಲಿ ಭಾರತಕ್ಕೆ ಸಂಕಷ್ಟಗಳು ಜನಸಂಖ್ಯೆ ಕುಸಿತದಿಂದ ಬರುವುದರಲ್ಲಿ ಅಚ್ಚರಿಯಿಲ್ಲ.

ಕುಸಿಯುತ್ತಿರುವ ಮಕ್ಕಳ ಜನನ ಪ್ರಮಾಣದ ಸಮಸ್ಯೆಯನ್ನು ಜಪಾನ್ ಬಗೆಹರಿಸದೇ ಇದ್ದರೆ ಆ ದೇಶ ಅಸ್ತಿತ್ವ ಕಳೆದುಕೊಳ್ಳಬಹುದು ಎಂದು ಉದ್ಯಮಿ ಎಲಾನ್ ಮಸ್ಕ್ ಇತ್ತೀಚೆಗೆ ಹೇಳಿಕೆ ನೀಡಿದ್ದು ವಿಶ್ವದಾದ್ಯಂತ ಸುದ್ದಿ ಹಾಗೂ ಟೀಕೆಗೆ ಕಾರಣವಾಗಿತ್ತು. ಟೀಕೆಗೆ ಕಾರಣವಾಗಿದ್ದು, ಮಸ್ಕ್ ಅಲ್ಲ ಜಪಾನ್ ಸರ್ಕಾರ, ಜನನ ಪ್ರಮಾಣ ಹೆಚ್ಚಿಸಲು ಸಮರ್ಪಕ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ.

ಜಪಾನ್ ಜನಸಂಖ್ಯೆ 2008ರಲ್ಲಿ 12.81 ಕೋಟಿ ಆಗಿತ್ತು. ಅದು ನಂತರದ ವರ್ಷಗಳಲ್ಲಿ ಇಳಿಕೆಯಾಗುತ್ತಾ ಬಂದು 12.58 ಕೋಟಿಗೆ ಕುಸಿದಿದೆ. ಇದೇ ವೇಳೆ ವೃದ್ಧರ ಸಂಖ್ಯೆ ಏರುಮುಖವಾಗಿದೆ. ಮುಂಬರುವ ದಿನಗಳಲ್ಲಿ ಯುವ ಪೀಳಿಗೆಯ ಕೊರತೆಯಿಂದಾಗಿ ಜಪಾನ್ ಸಾಕಷ್ಟು ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಸಿಲುಕುವ ಅಪಾಯವಿದೆ.

ಆದರೆ, ಈ ಸಮಸ್ಯೆ ಜಪಾನ್‌ದ್ದಷ್ಟೇ ಅಲ್ಲ. ಬಹುತೇಕ ಬೆಳವಣಿಗೆ ಹೊಂದಿರುವ ದೇಶಗಳಲ್ಲಿ ಜನನ ದರ ಕುಸಿಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತ ಸಹ ಇಂತಹ ದೇಶಗಳ ಸಾಲಿಗೆ ಸೇರ್ಪಡೆಯಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ - 5 ರ ವರದಿ ಪ್ರಕಾರ ದೇಶದಲ್ಲಿ ಜನನ ದರ 2ರ ಹಂತಕ್ಕೆ ಕುಸಿದಿದೆ.

ಜನಸಂಖ್ಯೆ ಸ್ಥಿರವಾಗಿರಲು ಜನನ ದರ 2.1 ರಷ್ಟಿರಬೇಕಿದೆ. ಜನನ ದರ ಕಡಿಮೆ ಯಾದಷ್ಟೂ ಜನಸಂಖ್ಯೆ ಕುಸಿಯುತ್ತಾ ಹೋಗು ತ್ತದೆ. ಜನಸಂಖ್ಯಾ ಸ್ಫೋಟದಿಂದ ತತ್ತರಿಸುತ್ತಿರುವ ದೇಶಕ್ಕೆ ಇದು ಒಳ್ಳೆಯ ಸುದ್ದಿ ಎನ್ನಿಸಬಹುದು. ವಾಸ್ತವವಾಗಿ ಆ ರೀತಿ ಆಗದು. ಏಕೆಂದರೆ ಜನಸಂಖ್ಯೆ ಕಡಿಮೆಯಾಗುತ್ತಿರುವು ದಕ್ಕೆ ಕಾರಣ ಮಕ್ಕಳ ಜನನ ಪ್ರಮಾಣ ಕುಸಿತ. ಮಕ್ಕಳು ಕಡಿಮೆಯಾದಷ್ಟು ಭವಿಷ್ಯದ ದಿನಗಳಲ್ಲಿ ದುಡಿಯುವ ಕೈಗಳ ಸಂಖ್ಯೆ ಕಡಿಮೆಯಾಗುತ್ತದೆ. ಇದೇ ಕಾರಣಕ್ಕೆ ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ, ಮಕ್ಕಳ ಸಂಖ್ಯೆ ಹೆಚ್ಚಿಸುವಂತೆ ತನ್ನ ಜನರಿಗೆ ಕರೆ ನೀಡುತ್ತಿದೆ.

ಎನ್.ಎಫ್.ಹೆಚ್.ಎಸ್. (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ) ವರದಿಯಲ್ಲಿ ತಿಳಿಸಲಾಗಿರುವ ಜನಸಂಖ್ಯಾ ದರದ ಕುಸಿತವನ್ನು ಯಾವ ರೀತಿ ಬಣ್ಣಿಸಲಾಗುತ್ತಿದೆ ಎಂದರೆ, ಕೇವಲ ಐದು ರಾಜ್ಯಗಳು ಮಾತ್ರ ಜನನ ದರ 2.1ಕ್ಕೆ ಇಳಿಸಲು ವಿಫಲವಾಗಿವೆ. ಉಳಿದ ರಾಜ್ಯಗಳು ಗುರಿ ತಲುಪುವಲ್ಲಿ ಸಫಲವಾಗಿವೆ ಎಂದು ಹೇಳಲಾಗಿದೆ.

ಆದರೆ, ಗಂಭೀರ ಸಮಸ್ಯೆ ಈ ಐದು ರಾಜ್ಯಗಳಲ್ಲಿ ಇಲ್ಲ. ಉಳಿದ ರಾಜ್ಯಗಳಿಗೆ ಬರಲಿದೆ. ಏಕೆಂದರೆ ಮುಂಬರುವ ದಶಕದಲ್ಲಿ ಈ ರಾಜ್ಯಗಳಲ್ಲಿ ದುಡಿಯುವ ಕೈಗಳ ಕೊರತೆ ಉದ್ಭವಿಸಲಿದೆ. ಯಾವುದೇ ಧರ್ಮ, ಪ್ರಾಂತ್ಯ ಭೇದವಿಲ್ಲದೆ ಎಲ್ಲೆಡೆ ಜನನ ಪ್ರಮಾಣ ಕುಸಿಯುತ್ತಿದೆ. ಆರ್ಥಿಕ ಅನಿಶ್ಚಿತತೆ, ಆಧುನಿಕ ಜೀವನ ಶೈಲಿ, ಬದಲಾದ ಕೌಟುಂಬಿಕ ಸ್ವರೂಪ ಇತ್ಯಾದಿಗಳ ಕಾರಣದಿಂದಾಗಿ ಮುಂದಿನ ದಿನಗಳಲ್ಲಿ ಭಾರತದಲ್ಲಿ ಮಕ್ಕಳ ಜನನ ಇನ್ನಷ್ಟು ಕಡಿಮೆಯಾಗುವ ಎಲ್ಲ ಲಕ್ಷಣಗಳಿವೆ.

ಜನನ ಪ್ರಮಾಣ ಇಳಿಕೆ ಮಾಡಿದ್ದನ್ನು ಸರ್ಕಾರಿ ಮಂದಿ ಸಾಧನೆ ಎಂದು ಬಿಂಬಿಸಿಕೊಳ್ಳುವುದರಲ್ಲಿ ಯಾವುದೇ ಅರ್ಥವಿಲ್ಲ. ಏಕೆಂದರೆ ಜನಸಂಖ್ಯೆ ನಿಯಂತ್ರಣಕ್ಕಾಗಿ ಸರ್ಕಾರ ಇದುವರೆಗೂ ಯಾವುದೇ ಸಕಾರಾತ್ಮಕ ಕ್ರಮ ತೆಗೆದುಕೊಂಡಿಲ್ಲ. ಸಾಮಾಜಿಕ - ಆರ್ಥಿಕ ಬದಲಾವಣೆಯ ಅಡ್ಡ ಪರಿಣಾಮಗಳಲ್ಲಿ ಒಂದಾಗಿ ಜನನ ಪ್ರಮಾಣ ಕಡಿಮೆಯಾಗಿದೆ ಅಷ್ಟೇ.

ಜಪಾನ್‌ನಲ್ಲಿ ಜನನ ದರ ಕಡಿಮೆಯಾಗಲು ಮಕ್ಕಳನ್ನು ಬೆಳೆಸುವ ವೆಚ್ಚದಲ್ಲಿ ಹೆಚ್ಚಳ, ಮಕ್ಕಳ ಕಾಳಜಿ ವಹಿಸಲು ಸೌಲಭ್ಯಗಳ ಕೊರತೆ ಹಾಗೂ ದೀರ್ಘ ದುಡಿಮೆಯ ಅವಧಿ ಕಾರಣ ಎಂದು ಹಲವಾರು ಪರಿಣಿತರು ದೂರುತ್ತಿದ್ದಾರೆ.

ಭಾರತದಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಕುಟುಂಬ ನಿರ್ವಹಣೆ ದಿನೇ ದಿನೇ ದುಬಾರಿಯಾಗುತ್ತಿದೆ. ಕೊರೊನಾ ನಂತರ ಆರ್ಥಿಕ ಪರಿಸ್ಥಿತಿ ಅಸ್ಥಿರವಾಗಿದೆ. ಅನಿಶ್ಚಿತತೆ ಎಲ್ಲೆಡೆ ಆವರಿಸಿರುವಾಗ, ಹೆಚ್ಚು ಮಕ್ಕಳನ್ನು ಹೊಂದಲು ಮನಸ್ಸು ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ.

ಜನಸಂಖ್ಯೆ ಕಡಿಮೆ ಮಾಡುವ ದಿಕ್ಕಿನಲ್ಲಿ ಸರ್ಕಾರಗಳು ಸಕಾರಾತ್ಮಕ ಕ್ರಮ ತೆಗೆದುಕೊಳ್ಳಲಿಲ್ಲ. ಆದರೆ, ಜನನ ದರ ಹೆಚ್ಚಿಸುವ ದಿಕ್ಕಿನಲ್ಲಿ ಸಕಾರಾತ್ಮಕ ಕ್ರಮ ತೆಗೆದುಕೊಳ್ಳುವ ಅನಿವಾರ್ಯತೆ ಇದೆ. ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳದೇ ಹೋದರೆ, ಮುಂದಿನ ದಶಕಗಳಲ್ಲಿ ಭಾರತಕ್ಕೆ ಸಂಕಷ್ಟಗಳು ಜನಸಂಖ್ಯೆ ಕುಸಿತದಿಂದ ಬರುವುದರಲ್ಲಿ ಅಚ್ಚರಿಯಿಲ್ಲ.

# ವಿಜ್ಞಾನ ಪಾರಂಗತರಿಂದ ಅಧ್ಯಾತ್ಮಿಕ ಉಪನ್ಯಾಸ

ರಸಾಯನಶಾಸ್ತ್ರದಲ್ಲಿ ಎಂಎಸ್ಸಿ ಹಾಗೂ ಎಂ. ಫಿಲ್ ಮಾಡಿ ಸುಮಾರು 33 ವರ್ಷಗಳ ಕಾಲ ಪುಣೆಯ ಪ್ರತಿಷ್ಠಿತ ವಾಡಿಯಾ ಕಾಲೇಜಿನಲ್ಲಿ ರಸಾಯನ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರೊ. ಗುರುರಾಜ ಸಿ ಕುಲಕರ್ಣಿಯವರು ರಸಾಯನಶಾಸ್ತ್ರದ ವಿವಿಧ ವಿಭಾಗಗಳ ಕುರಿತು ಸುಮಾರು 60ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದು ಈ ಪುಸ್ತಕಗಳು ವಿಶ್ವವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳಾಗಿವೆ.

ಇವರು ಪ್ರತಿಷ್ಠಿತವಾದ 'ಭಾರತೀಯ ರಸಾಯನಶಾಸ್ತ್ರ ಸಂಶೋಧನಾ ಸಂಘ'ದ 'ಅತ್ಯುತ್ತಮ ರಾಷ್ಟ್ರೀಯ ಶಿಕ್ಷಕ' ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಗುರುರಾಜ ಕುಲಕರ್ಣಿಯವರು ಅಮೇರಿಕಾದ ಬಾಲ್ಟಿಮೋರ್, ಇಲಿನಾಯ್ಸ್, ಲೋವಾ, ಬಾಸ್ಟನ್ ಹಾಗೂ ಕೆನಡಾದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಪೌಢ ಉಪನ್ಯಾಸಗಳನ್ನು ನೀಡಿದ್ದಾರೆ. ಭಾರತದ ತಿರುವನಂತಪುರದ ವಿಕ್ರಂ ಸಾರಾ ಭಾಯಿ ಬಾಹ್ಯಾಕಾಶ ಕೇಂದ್ರ, ಮುಂಬೈನ ಬಾಬಾ ಅಣು ಸಂಶೋಧನಾ ಕೇಂದ್ರ ಮುಂತಾದ ಕಡೆಗಳಲ್ಲಿ ಉಪನ್ಯಾಸಗಳನ್ನು ನೀಡಿರುವ ಕುಲಕರ್ಣಿಯವರು ಪ್ರಸ್ತುತ ಅಧ್ಯಾತ್ಮ ಸಾಹಿತ್ಯದ ಕಡೆಗೆ ಹೆಚ್ಚು ತೊಡಗಿಸಿ ಕೊಂಡಿದ್ದು ಕುಮಾರ ವ್ಯಾಸ ವಿರಚಿತ 'ಕರ್ನಾಟಕ ಭಾರತ ಕಥಾಮಂಜರಿ' ಮಹಾಭಾರತವನ್ನು ಮರಾಠಿ ಭಾಷೆಗೆ ಭಾಷಾಂತರಿಸಿದ್ದಾರೆ.



ಹಾಗೆಯೇ ಸಂಸ್ಕೃತದ ಶ್ರೀ ರಾಘವೇಂದ್ರ ಸ್ತೋತ್ರವನ್ನು, ಕೃಷ್ಣಮೂರ್ತಿ ಪುರಾಣಿಕರ ಜೀವನ ಚರಿತ್ರೆ ಯನ್ನು ಮರಾಠಿ ಭಾಷೆಗೆ ಭಾಷಾಂತರಿಸಿದ್ದು ಕನ್ನಡದ ದಾಸ ಪರಂಪರೆಯ ಶ್ರೇಷ್ಠ ಸಾಹಿತ್ಯವನ್ನು ಮರಾಠಿಗರಿಗೆ ಪರಿಚಯಿಸುವ ಮಾಲಿಕೆಯಲ್ಲಿ ಪುರಂದರದಾಸರ ಕುರಿತಾಗಿ ಮರಾಠಿಯಲ್ಲಿ ಗ್ರಂಥ ರಚನೆ ಮಾಡುತ್ತಿದ್ದಾರೆ.

## ನಗರದಲ್ಲಿ ಇಂದು - ನಾಳೆ

ಗುರುರಾಜ ಸಿ ಕುಲಕರ್ಣಿ ಅವರು ಇಂದು ದಾವಣಗೆರೆಗೆ ಆಗಮಿಸುತ್ತಿದ್ದು, ಕೆ.ಬಿ. ಬಡಾವಣೆಯ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಮಠದಲ್ಲಿ ದಿನಾಂಕ 11 ಹಾಗೂ 12ರ ಸಂಜೆ ಸಂಜೆ 6 ರಿಂದ 7 ರವರೆಗೆ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳ ವಿರಚಿತ 'ಶ್ರೀ ರಾಮಚಾರಿತ್ರ ಮಂಜರೀ' ಕುರಿತಾಗಿ ವಿಶೇಷ ಉಪನ್ಯಾಸ ನೀಡಲಿದ್ದಾರೆ.

**-ಎಚ್.ಬಿ.ಮಂಜುನಾಥ್,**
ಹಿರಿಯ ಛಾಯಾಗ್ರಾಹಕರು

# ಮೊಬೈಲ್ ಉನ್ನತ ವಿಭಾಗದಲ್ಲಿ ಸ್ಯಾಮ್‌ಸಂಗ್ ಪ್ರಥಮ

ನವದೆಹಲಿ, ಮೇ 10 – ಮೂರು ವರ್ಷಗಳ ಹಿಂದೆ ಉನ್ನತ ಹಂತದ ಮೊಬೈಲ್ ವಲಯದಲ್ಲಿ ಮೊದಲ ಸ್ಥಾನವನ್ನು ಆ್ಯಪಲ್‌ಗೆ ಕಳೆದುಕೊಂಡಿದ್ದ ಸ್ಯಾಮ್‌ಸಂಗ್, ಮತ್ತೆ ಮೊದಲ ಸ್ಥಾನಕ್ಕೆ ಬಂದಿದೆ. ಗ್ಯಾಲಕ್ಸಿ ಎಸ್22 ಮಾರಾಟದಿಂದಾಗಿ ಈ ಸ್ಥಾನ ಸ್ಯಾಮ್‌ಸಂಗ್‌ಗೆ ದೊರೆತಿದೆ ಎಂದು ಕೌಂಟರ್‌ಪಾಯಿಂಟ್ ರೀಸರ್ಚ್ ತಿಳಿಸಿದೆ.

ವರದಿಯ ಪ್ರಕಾರ, ಭಾರತದಲ್ಲಿ ಮಾರ್ಚ್ ತಿಂಗಳಲ್ಲಿ ಲಕ್ಷ ರೂ.ಗಳಿಗೂ ಹೆಚ್ಚಿನ ಬೆಲೆಯ ಸ್ಮಾರ್ಟ್‌ಫೋನ್ ವಿಭಾಗದಲ್ಲಿ ಗ್ಯಾಲಕ್ಸಿ ಎಸ್22 ಅಲ್ಟ್ರಾ ಶೇ.74ರ ಪಾಲು ಹೊಂದಿದೆ.

ಒಟ್ಟಾರೆ ಸ್ಮಾರ್ಟ್‌ಫೋನ್ ವಿಭಾಗದಲ್ಲೂ ಕಂಪನಿ ಮುಂಚೂಣಿಗೆ ಬಂದಿದೆ. ಮಾರ್ಚ್ ತಿಂಗಳಲ್ಲಿ ಸ್ಮಾರ್ಟ್ ಫೋನ್‌ಗಳಲ್ಲಿ ಸ್ಯಾಮ್‌ಸಂಗ್ ಪಾಲು ಶೇ.22ರಷ್ಟಿತ್ತು ಎಂದು ಕೌಂಟರ್‌ಪಾಯಿಂಟ್ ರೀಸರ್ಚ್ ತಿಳಿಸಿದೆ.


**REQUIRED**
**Mechanical Fitter**
for our Fertilizer Mixer Plant at Davanagere having **5-6 years experience** in Maintenance of Plant & Machinery. Salary Based on Experience.
CONTACT :
**ACCUTECH AGRO PVT. LTD.,**
Near Honnur Gollarahatti, N.H-4 Road, Davanagere-577556
**Whats App : 9606922871/9606922874**
Email:accutechagropvtltd@gmail.com

**JOB & FRANCHISE OPPORTUNITY**
**G shop Retail Private Limited**
is a retail convience store and we are looking qualified sales candidates to manage sales at our G Shop stores located on across Davanagere city.
If you are interested
Please attend the Briefing session and Interview on Friday
(Date : 13.5.2022) at 10.30 Am
**Venue : Pooja Hotel**
**Contact No**
**96200 86824, 90712 91672**




ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್.
**ವ್ಯವಸ್ಥಾಪಕ ನಿರ್ದೇಶಕರ ಕಾರ್ಯಾಲಯ,** ವಿಳಾಸ:– ಪ್ಲಾಟ್ ನಂ.77, ಜಿಲ್ಲಾಡಳಿತ ಭವನದ ಆವರಣ, ಕರೂರು ಇಂಡಸ್ಟ್ರೀಯಲ್ ಏರಿಯಾ, ಹಳೇ ಬಿ.ಪಿ. ರಸ್ತೆ, ದಾವಣಗೆರೆ–577 006.
ದೂ.ಸಂ. 08192–222383. ಸಿಐಎನ್: U74999KA2016PLC093411
E-mail: smartcitydavanagere@gmail.com
**ಸಂ: ಡಿಎಸ್‌ಸಿಎಲ್/ಸಾಆಶಾ/ನೇಮಕಾತಿ/ಸಿಆರ್–2/ 2022–23/228 ದಿನಾಂಕ: 09.05.2022**
**ನೇಮಕಾತಿ ಅಧಿಸೂಚನೆ**
ವ್ಯವಸ್ಥಾಪಕ ನಿರ್ದೇಶಕರು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ ಇವರು ಈ ಕೆಳಗಿನ ಹುದ್ದೆಗೆ ಅರ್ಜಿ ಕರೆದಿದ್ದಾರೆ.
**1) ಉಪ ಪ್ರಧಾನ ವ್ಯವಸ್ಥಾಪಕರು–ಐ.ಟಿ : 01 ಹುದ್ದೆ.**
**(Deputy General Manager-IT: 01 Post)**
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19.05.2022 ಸಂಜೆ 4.00 ರೊಳಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೆಬ್‌ಸೈಟ್ www.davanageresmartcity. mrc.gov.in ನೋಡುವುದು.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ.
ವಾಸಾಇ/ ದಾವಣಗೆರೆ/ 108/ಎಂಸಿಎ/ 2022–23



**ಸಾರ್ವಜನಿಕ ನೋಟೀಸ್**
**ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್,** ಪ್ಲಾಟ್ ಫಾರಂ ನಂ.1ಡಿ, ಲೋಕಿಕೆರೆ ರಸ್ತೆ, ಕೈಗಾರಿಕಾ ಪ್ರದೇಶ, ದಾವಣಗೆರೆ-577005
**ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್** ನೋಂದಾಯಿತ ಪಾಲುದಾರಿಕೆ ಸಂಸ್ಥೆಯಾಗಿದ್ದು, ನನ್ನ ಕಕ್ಷಿದಾರರಾದ **ಬಿ.ಎಂ. ರಾಜಶೇಖರ್ ಬಿನ್ ಎಂ. ವೀರಯ್ಯ** ಅವರು ಒಬ್ಬ ಪಾಲುದಾರರಾಗಿದ್ದಾರೆ. ಪಾಲದಾರಿಕೆ ಸಂಸ್ಥೆಯ ಪಾಲುದಾರರ ಮಧ್ಯ ಭಿನ್ನಾಭಿಪ್ರಾದಿಂದ ಪಾಲುದಾರಿಕೆ ಸಂಸ್ಥೆಯನ್ನು ವಿಸರ್ಜಿಸಲು ಮತ್ತು ಸರಿಯಾದ ಲೆಕ್ಕ ಪತ್ರಗಳನ್ನು ಸಲ್ಲಿಸಲು ದಿನಾಂಕ : 03.07.2019 ರಂದು ಕಾನೂನಿನ ಪ್ರಕಾರ **ಬಿ.ಎಂ. ಚಂದ್ರಶೇಖರಯ್ಯ ಬಿನ್ ಎಂ. ವೀರಯ್ಯ** ಅವರಿಗೆ ನೋಟಿಸ್ ಕೊಟ್ಟಿರುತ್ತಾರೆ.
ನನ್ನ ಕಕ್ಷಿದಾರರು ಮಾನ್ಯ **ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದಲ್ಲಿ ಮಧ್ಯಂತರ ಆದೇಶಕ್ಕಾಗಿ AA.01/2019 ದಾವೆ ದಾಖಲಿಸಿ** ಅದರ ಆದೇಶದಂತೆ ನನ್ನ ಕಕ್ಷಿದಾರರಾದ **ಬಿ.ಎಂ ರಾಜಶೇಖರಯ್ಯ ಬಿನ್.ಎಂ. ವೀರಯ್ಯ** ಮತ್ತು ಎದುರುದಾರರಾದ **ಬಿ.ಎಂ. ಚಂದ್ರಶೇಖರಯ್ಯ ಬಿನ್ ಎಂ. ವೀರಯ್ಯ** ಅವರನ್ನು **ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್** ಪಾಲುದಾರಿಕೆಯ ಆಸ್ತಿ, ಲೆಕ್ಕ ಪತ್ರಗಳನ್ನು ಮತ್ತು ವ್ಯವಹಾರವನ್ನು ಜಂಟಿಯಾಗಿ ನಿರ್ವಹಿಸಲು ದಿನಾಂಕ : 29.11.2021 ರಂದು ದಾವಣಗೆರೆ ಜಿಲ್ಲಾ ಸತ್ರ ನ್ಯಾಯಾಲಯವು ಆದೇಶ ಮಾಡಿರುತ್ತದೆ. ನ್ಯಾಯಾಲಯದ ಆದೇಶದಂತೆ ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್‌ನೊಂದಿಗೆ ವ್ಯವಹರಿಸುವ ವ್ಯಾಪಾರಸ್ಥರು, ಖರೀದಿದಾರರು, ರೈತರು ಮತ್ತು ಇತರರು ಪಾಲುದಾರಿಕೆ ಸಂಸ್ಥೆಯ ಅಧಿಕೃತ **ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್‌ನ** ಮಾರಾಟ ಬಿಲ್ ಮತ್ತು ಖರೀದಿ ಬಿಲ್‌ಗಳಿಗೆ ಜಿಲ್ಲಾ ಸತ್ರ ನ್ಯಾಯಾಲಯದಿಂದ ರಿಸೀವರ್ಸ್ ಎಂದು ನೇಮಿಸಲ್ಪಟ್ಟ ನನ್ನ ಕಕ್ಷಿದಾರರಾದ **ಬಿ.ಎಂ. ರಾಜಶೇಖರ್** ಮತ್ತು ಎದುರುದಾರರಾದ **ಬಿ.ಎಂ. ಚಂದ್ರಶೇಖರಯ್ಯ** ಅವರ ಜಂಟಿ ಸಹಿಯೊಂದಿಗೆ ಮಾತ್ರ ವ್ಯವಹರಿಸಲು ಕೋರಿದೆ. ಮತ್ತು **ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್‌ನ** ಒಳ ಬರುವ ಮತ್ತು ಹೊರ ಹೋಗುವ ಯಾವುದೇ ಸರಕುಗಳಿಗೆ ರಿಸೀವರ್ಸ್ ಆದ **ಬಿ.ಎಂ. ರಾಜಶೇಖರ್** ಮತ್ತು **ಬಿ.ಎಂ. ಚಂದ್ರಶೇಖರಯ್ಯ** ಜಂಟಿ ಸಹಿಯಿದ್ದರೆ ಮಾತ್ರ ಒಪ್ಪಿಗೆಯಿರುತ್ತದೆ. **ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್** ನ ಮಾರಾಟ ಬಿಲ್ ಹಾಕದೆ **ಶ್ರೀ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್**‌ನಿಂದ ಭತ್ತ, ಅಕ್ಕಿ, ದಪ್ಪನುಚ್ಚು, ಮೂಗುನುಚ್ಚು, ಭತ್ತದಗೊಳಲಿ ಖರೀದಿ ಮಾಡಿದ್ದಲ್ಲಿ ಮುಂದಿನ ದಿನಗಳಲ್ಲಿ ಕಾನೂನು ರೀತಿ ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.
ದಿನಾಂಕ : 10.05.2022
ಸ್ಥಳ: ದಾವಣಗೆರೆ
ವಕೀಲರು ಸಹಿ/-
**ಡಿ.ಎಸ್.ರಾಜಶೇಖರ್**
**98804 48882**



**ಮಹಿಳಾ ಸೇವಾ ಸಮಾಜ (ರಿ.)**
**ಶ್ರೀಮತಿ ಟಿ.ಎಂ. ಚಿನ್ನಮ್ಮ ಶ್ರೀ ಮಹೇಶ್ವರಯ್ಯ ಮೆಮೋರಿಯಲ್ ಪದವಿಪೂರ್ವ ಕಾಲೇಜು**
(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಅಶೋಕ ರಸ್ತೆ, ದಾವಣಗೆರೆ-2. ಫೋನ್ : 08192-233010




**2022–23ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರಥಮ ಪಿಯುಸಿ ಕಲಾ ಮತ್ತು ವಾಣಿಜ್ಯ ತರಗತಿಗಳಿಗೆ ಪ್ರವೇಶ ಪ್ರಕಟಣೆ**
**ಸಂಯೋಜನೆಗಳು :**
1) ಕಲಾ ವಿಭಾಗ - ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣಶಾಸ್ತ್ರ (HEPE)
2) ವಾಣಿಜ್ಯ ವಿಭಾಗ - ಅರ್ಥಶಾಸ್ತ್ರ ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಕಂಪ್ಯೂಟರ್ ವಿಜ್ಞಾನ (ABEC)
**ವಿಷಯ ಸಂಯೋಜನೆಗಳು :**
ಭಾಗ -1 : ಕನ್ನಡ, ಇಂಗ್ಲಿಷ್, ಹಿಂದಿ, ಭಾಗ -2 : ಐಚ್ಛಿಕ ವಿಷಯಗಳು
**ಕಾಲೇಜಿನ ವೈಶಿಷ್ಟತೆ :**
* ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ.
* ಕಾಲೇಜು ನಗರದ ಮಧ್ಯ ಭಾಗದಲ್ಲಿದ್ದು, ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್ ನಿಲ್ದಾಣ ಹಾಗೂ ರೈಲ್ವೇ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ.
* ಸಾಂಸ್ಕೃತಿಕ ಬೆಳವಣಿಗೆ, ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪ್ರೋತ್ಸಾಹ.
* ಅನುಭವಿ ಉಪನ್ಯಾಸಕರಿಂದ ನಿಸ್ವಾರ್ಥ ಸೇವೆ ಹಾಗೂ ಆಡಳಿತ ಮಂಡಳಿಯವರ ಪ್ರೋತ್ಸಾಹ.
* ಸುಸಜ್ಜಿತ ವಾಚನಾಲಯ, ಗಣಕಯಂತ್ರ ಪ್ರಯೋಗಾಲಯ ಹಾಗೂ ಸುರಕ್ಷಿತ ಕ್ಯಾಂಪಸ್.
* ಪ್ರತಿ ವಿದ್ಯಾರ್ಥಿನಿಯರಿಗೂ ವೈಯಕ್ತಿಕ ಗಮನ ಹಾಗೂ ಕಲಿಕೆಗೆ ಪ್ರೋತ್ಸಾಹ.
* ಪರಿಹಾರ ಬೋಧನಾ ತರಗತಿಗಳು.
* ಪ್ರತಿ ತಿಂಗಳು ಕಿರು ಪರೀಕ್ಷೆಗಳು.
* ವಿಶಾಲವಾದ ಕಟ್ಟಡ, ಮೌಲ್ಯಯುತ ಶಿಕ್ಷಣ

ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 10-30 ರಿಂದ 2-00 ಗಂಟೆಯವರೆಗೆ ವಿತರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
**ದೂರವಾಣಿ ಸಂಖ್ಯೆ : 08192-233010**
**ಮೊಬೈಲ್ ಸಂಖ್ಯೆ : 9980432468, 8792181964**
E-mail ID : chinnammacollege@gmail.com

ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು | ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ | ಶ್ರೀ ರವಿಕುಮಾರ್ ಹೆಚ್.ಹೆಚ್. ಪ್ರಾಚಾರ್ಯರು

# ದ್ಯಾಮೇನಹಳ್ಳಿ: ನಿವೇಶನ ವಿವಾದ ಸುಖಾಂತ್ಯ



ದಾವಣಗೆರೆ, ಮೇ 10- ತಾಲ್ಲೂಕಿನ ಬಾಡ ಜಿಲ್ಲಾ ಪಂಚಾಯಿತಿ ಕ್ಷೇತ್ರ ವ್ಯಾಪ್ತಿಯ ದ್ಯಾಮೇನಹಳ್ಳಿ ಗ್ರಾಮದಲ್ಲಿ ಶೋಷಿತ ಸಮುದಾಯಗಳಿಗೆ ನಿವೇಶನ ನೀಡುವ ಸಂಬಂಧ ಉಂಟಾಗಿದ್ದ ವಿವಾದವು, ಗ್ರಾಮದ ಹಾಗೂ ಬಿಜೆಪಿ ಮುಖಂಡರ ಮಧ್ಯಪ್ರವೇಶದಿಂದ ತಿಳಿಗೊಂಡು ಸುಖಾಂತ್ಯ ಕಂಡಿದೆ.

ಗ್ರಾಮದಲ್ಲಿ ಭಾನುವಾರ ರಾತ್ರಿ ಬಿಜೆಪಿ ಮುಖಂಡರಾದ ಆಲೂರು ನಿಂಗರಾಜ್, ಆಲೂರು ಚನ್ನಬಸಪ್ಪ ನೇತೃತ್ವದಲ್ಲಿ ನಡೆದ ಶಾಂತಿ ಸಭೆಯಲ್ಲಿ ಎಲ್ಲ ಕೋಮಿನ ಜನರನ್ನು ಒಟ್ಟುಗೂಡಿಸಿ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ, ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ತಾಕೀತು ಮಾಡಲಾಯಿತು. ಹಿರಿಯರು ಹಾಗೂ ಮುಖಂಡರು ನೀಡಿದ ಸಲಹೆಗಳನ್ನು ಘರ್ಷಣೆಯಲ್ಲಿ ಪಾಲ್ಗೊಂಡವರು ಒಪ್ಪಿಕೊಂಡರು.

ನಿವೇಶನ ರಹಿತ ಶೋಷಿತ ಸಮುದಾಯದ ಕೆಲವರಿಗೆ ನಿವೇಶನ ನೀಡಲು ಮುಂದಾದಾಗ ಉಂಟಾಗಿದ್ದ ವಿವಾದ ತೀವ್ರಗೊಂಡು, ಘರ್ಷಣೆ ನಡೆದು ಪೊಲೀಸ್ ಠಾಣೆ ಮೆಟ್ಟಿಲೇರಿತ್ತು. ಸಣ್ಣದಾಗಿ ಹುಟ್ಟಿಕೊಂಡ ವಿವಾದ ವಿಕೋಪಕ್ಕೆ ಹೋಗಿ, ಗ್ರಾಮದಲ್ಲಿ ಬೂದಿ ಮುಚ್ಚಿದ ಕೆಂಡದಂತೆ ಆಗಿತ್ತು.

ನಿವೇಶನ ಇಲ್ಲದ 12 ಕುಟುಂಬಗಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಕೆಲ ವರ್ಷಗಳಿಂದ ತಾತ್ಕಾಲಿಕವಾಗಿ ಗುಡಿಸಲು ನಿರ್ಮಿಸಿಕೊಂಡಿದ್ದರು. ಗ್ರಾಮದ ಇನ್ನೂ ಕೆಲವರು ಇತ್ತೀಚೆಗೆ ಇಲ್ಲಿ ಗುಡಿಸಲು ನಿರ್ಮಿಸಲು ಮುಂದಾದಾಗ ವಿವಾದ ತಾರಕಕೇರಿತ್ತು.

ಭಾನುವಾರ ಶಾಂತಿ ಸಭೆ ನಡೆಸಿದ ಗ್ರಾಮಸ್ಥರು, ನಿವೇಶನ ರಹಿತ 12 ಕುಟುಂಬಗಳಿಗೆ ತಾತ್ಕಾಲಿವಾಗಿ ದೇವಸ್ಥಾನ ಜಾಗದಲ್ಲಿ ವಾಸ ಇರಲು ಅವಕಾಶ ಮಾಡಿದರು.

ಇನ್ನು ಕೆಲವರು, ನಮ್ಮ ಕುಟುಂಬಗಳಲ್ಲಿಯೂ ಜನಸಂಖ್ಯೆ ಹೆಚ್ಚಾಗಿ ಮನೆಗಳು ಕಿರಿದಾಗಿವೆ. ನಮಗೂ ನಿವೇಶನ ಬೇಕೆಂದು ಪಟ್ಟು ಹಿಡಿದರು.

ದೇವಸ್ಥಾನದ ಜಾಗ ನ್ಯಾಯಾಲಯದಲ್ಲಿದೆ. ನಿವೇಶನ ಮಾಡಿ ನೀಡಲು ಕಾನೂನಿನ ತೊಡಕಿದೆ. ಆದ್ದರಿಂದ, ಗ್ರಾಮದಲ್ಲಿ ಅಗತ್ಯ ಇರುವ ಕುಟುಂಬಗಳಿಗೆ ಬದಲಿ ಎರಡು ಎಕರೆ ಜಾಗ ಗುರುತಿಸಿ ಸರ್ಕಾರದಿಂದ ಬಡಾವಣೆ ನಿರ್ಮಿಸಲಾಗುವುದು. ಇಲ್ಲಿ ಅರ್ಹ ಎಲ್ಲರಿಗೂ ನಿವೇಶನ ಹಂಚಿಕೆ ಮಾಡಿಸಿಕೊಡಲಾಗುವುದೆಂದು ಮುಖಂಡ ಆಲೂರು ನಿಂಗರಾಜ್ ಭರವಸೆ ನೀಡಿದರು.

ಈ ತೀರ್ಮಾನಕ್ಕೆ ಒಪ್ಪಿದ ಎಲ್ಲರೂ, ಸದ್ಯ ತಾತ್ಕಾಲಿಕವಾಗಿ 12 ಕುಟುಂಬಗಳು ಮಾತ್ರ ದೇವಸ್ಥಾನ ಜಾಗದಲ್ಲಿರಲು ಒಕ್ಕೊರಲಿನಿಂದ ಒಪ್ಪಿದರು.

ಬಿಜೆಪಿ ಮುಖಂಡರಾದ ಮೂಗಪ್ಪ, ಕಕ್ಕರಗೊಳ್ಳ ಕಲ್ಲಿಂಗಣ್ಣ, ಆಲೂರು ಪ್ರಕಾಶ್, ಲೋಕಿಕೆರೆ ತಿಪ್ಪಣ್ಣ, ಗ್ರಾಪಂ.ನ ಡಿ.ಎಚ್. ಪ್ರಕಾಶ್, ಗ್ರಾಮಸ್ಥರಾದ ಸದಣ್ಣ, ರಾಜಣ್ಣ, ಷಣ್ಮುಖಪ್ಪ, ಚಂದ್ರಣ್ಣ, ಪರಮೇಶಣ್ಣ, ಪ್ರಭಣ್ಣ, ಚಂದ್ರೇಗೌಡ್ರು, ಶಿವಮೂರ್ತಣ್ಣ, ಕುಮಾರಣ್ಣ, ಓಬಣ್ಣ, ನಿಂಗಪ್ಪ, ಯಲ್ಲಪ್ಪ, ಜಯಪ್ರಕಾಶ್ ಡಿ.ಬಿ., ಶಾಂತಿ ಸಭೆಯಲ್ಲಿ ಭಾಗವಹಿಸಿದ್ದರು.

# ಎಸ್ಸೆಸ್ಸೆಲ್ಸಿ ಪಾಸಾದ ನಂತರ ಮುಂದೇನು? ಪ್ರಶ್ನೆಗೆ ಉತ್ತರ



ಹರಿಹರ, ಮೇ 10 - ಎಸ್.ಎಸ್.ಎಲ್.ಸಿ ಪಾಸಾದ ನಂತರ ಮುಂದೇನು? ಎನ್ನುವ ವಿದ್ಯಾರ್ಥಿಗಳಿಗೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ತರಬೇತಿ ನೀಡುವ ಜೊತೆಗೆ ಶೇ.100 ರಷ್ಟು ಉದ್ಯೋಗ ದೊರಕಿಸಲಾಗುವುದು ಎಂದು ಪ್ರಾಂಶುಪಾಲರಾದ ಲಕ್ಷ್ಮಣ್‌ನಾಯ್ಕ್ ಹೇಳಿದರು.

ಮಂಗಳವಾರ ಹರಿಹರದ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ತರಬೇತಿ ಕೇಂದ್ರದಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿಗಳನ್ನು ನೀಡಲಾಗುವುದು, ಅಲ್ಪಾವಧಿ ತರಬೇತಿಯಲ್ಲಿ ಸಿಎನ್‌ಸಿ ಪ್ರೋಗ್ರಾಮ್ ಮತ್ತು ಆಪರೇಟರ್, ಟರ್ನರ್, ಮಿಲ್ಲಿಂಗ್, ಟೂಲ್ ರೂಂ, ಮಷಿನಿಸ್ಟ್ ನಂತಹ ಬೇರೆ ಬೇರೆ ವಿಧವಾದ ವಿವಿಧ ತರಬೇತಿಗಳನ್ನು ನೀಡಲಾಗುವುದು. ತರ ಬೇತಿ ಪಡೆಯಲು ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೋಮಾ ಮಾಡಿರುವ ವಿದ್ಯಾರ್ಥಿಗಳು ಎರಡೂವರೆ ತಿಂಗಳು ತರಬೇತಿ ಪಡೆದು ಪ್ರಮಾಣ ಪತ್ರ ಪಡೆದುಕೊಂಡರೆ, ಅವರಿಗೆ ಶೇ.100 ರಷ್ಟು ಉದ್ಯೋಗಾವಕಾಶ ಕಲ್ಪಿಸಿಕೊಡಲಾಗುವುದು ಎಂದರು.

ಪ್ರಮುಖವಾಗಿ ಗ್ರಾಮೀಣ ಭಾಗದ ನಿರುದ್ಯೋಗಿಗಳಿಗೆ ಉದ್ಯೋಗ ಪಡೆಯಲು ಈ ತರಬೇತಿಯು ಸುವರ್ಣಾವಕಾಶವಾಗಿದೆ. ಈಗಾಗಲೇ ತರಬೇತಿ ಸಂಸ್ಥೆಯಿಂದ 560 ಕ್ಕೂ ಹೆಚ್ಚು ವಿದ್ಯಾರ್ಥಿಗಳು ತರಬೇತಿ ಪಡೆದು ದೇಶ-ವಿದೇಶಗಳ ವಿವಿಧ ಹೆಸರಾಂತ ಕಂಪನಿಗಳಲ್ಲಿ ಉದ್ಯೋಗವನ್ನು ಪಡೆದುಕೊಂಡಿದ್ದಾರೆ. ತಾಂತ್ರಿಕೇತರ ಪದವಿಗಳನ್ನು ಪಡೆದಂತಹ ವಿದ್ಯಾರ್ಥಿಗಳು ಕೂಡ ಅಲ್ಪಾವಧಿ ಕೋರ್ಸ್ ಮೂಲಕ ತರಬೇತಿ ಪಡೆದು ಉದ್ಯೋಗವನ್ನು ಪಡೆಯಬಹುದಾಗಿದೆ.

ಜಿಟಿಟಿಸಿ ಕೇಂದ್ರದಲ್ಲಿ ವಿವಿಧ ರೀತಿಯ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ನೀಡುವ ಜೊತೆಗೆ ಪ್ರತಿ ತಿಂಗಳು 2500 ರೂ. ಶಿಷ್ಯವೇತನ ನೀಡಲಾಗುವುದು.

ಪ್ರಸಕ್ತ ಸಾಲಿನಲ್ಲಿ 350 ಅಭ್ಯರ್ಥಿಗಳಿಗೆ ಅಲ್ಪಾವಧಿ ತರಬೇತಿ ನೀಡಲಾಗುತ್ತಿದೆ. ದೀರ್ಘಾವಧಿ ಕೋರ್ಸ್‌ಗಳಲ್ಲಿ ಪ್ರತಿ ವರ್ಷ 60 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡು ಅವರಿಗೆ ನಾಲ್ಕು(4+1) ವರ್ಷಗಳ ತರಬೇತಿ ನೀಡಲಾಗುತ್ತದೆ, ದೀರ್ಘಾವಧಿ ಕೋರ್ಸ್‌ಗೆ ಪ್ರವೇಶ ಪಡೆಯಲು ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಫೋರ್‌ಮೆನ್‌ಗಳಾದ ಗಣೇಶ್ ಮತ್ತು ಶಿವಕುಮಾರ್ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

# ಮುಂಗಾರು ಬೆಳೆಗಳ ಬಿತ್ತನೆಗೆ ಮುನ್ನ...

ಮುಂಗಾರು ಬೆಳೆಗಳ ಬಿತ್ತನೆಗೆ ಮುನ್ನ ರೈತರು ಗಮನಿಸಬೇಕಾದ ಅಂಶಗಳ ಬಗ್ಗೆ ಹಲವು ಸಲಹೆಗಳನ್ನು ನಿವೃತ್ತ ಕೃಷಿ ಅಧಿಕಾರಿ ಆರ್.ಜಿ. ಗೊಲ್ಲರ್ ನೀಡಿದ್ದಾರೆ.

* ಹೆಸರು, ಉದ್ದು, ಅಲಸಂದೆ, ಶೇಂಗಾ, ಗೋವಿನಜೋಳ, ಹತ್ತಿ ಮೇ ಅಂತ್ಯದೊಳಗೆ ಬಿತ್ತುವುದು ಸೂಕ್ತ.

* ಬಿತ್ತನೆ ತಡವಾದಂತೆ ಇಳುವರಿ ಕಡಿಮೆ ಆಗುವುದು ವಾಡಿಕೆ.

* ಬೇಗನೇ ಬಿತ್ತನೆ ಮಾಡುವುದರಿಂದ,

ಎಡೆ ಹೊಡೆಯಲು ಅನುಕೂಲ ಆಗುವುದು. ಬೆಳೆಯ ಆರಂಭದಲ್ಲಿ ಅತೀ ತೇವದ ಬಾಧೆ ತಡೆಯಲು ಸಾಧ್ಯವಾಗುವುದು. ಬೆಳೆಗಳಿಗೆ ಅಗತ್ಯ ಬಿಸಿಲು ಸಿಗುವುದರಿಂದ ಇಳುವರಿ ಮಟ್ಟ ಉತ್ತಮವಾಗುವುದು.

* ಬಿತ್ತುವ ಮುನ್ನ ಕ್ಲೋರೋ ಪೈರಿಫಾಸ್ (ಅಥವಾ ಅಜಾಡಿರಕ್ಟಿನ್) (3ಮಿಲೀ/ಕೆಜಿ) ಮತ್ತು ಕಾರ್ಬೆಂಡೈಜಿಂ 2 ಗ್ರಾಂ/ಕೆಜಿ (ಅಥವಾ ಟ್ರೈಕೋಡರ್ಮಾ 3 ಗ್ರಾಂ/ಕೆಜಿ) ಇವುಗಳಿಂದ ಬೀಜೋಪಚಾರ ಕಡ್ಡಾಯವಾಗಿ ಮಾಡಬೇಕು. ಬೀಜೋಪಚಾರ (ಕೀಟನಾಶಕ & ಶಿಲೀಂಧ್ರನಾಶಕ ಬಳಸಿ) ಮಾಡುವುದರಿಂದ ಬೀಜ ಮೊಳಕೆ ಪ್ರಮಾಣ ಉತ್ತಮವಾಗುವುದು.



ರೈತರಿಗೆ ಸಲಹೆ

* ಸಾಕಷ್ಟು ತಳ ಹಸಿ ಆಗಿದ್ದಲ್ಲಿ, ಶಿಫಾರಿತ ಪ್ರಮಾಣದ 35-50% ಗೊಬ್ಬರ ಬಳಸಬಹುದು. ಅಗತ್ಯತೆಗೆ ತಕ್ಕಂತೆ ಮಳೆಯಾದಂತೆ ಕಂತುಗಳಲ್ಲಿ ಗೊಬ್ಬರ ಬಳಕೆ ಮಾಡಬೇಕು.

ರಂಜಕದ (ಡಿಎಪಿ) ಅತಿ ಬಳಕೆ ಬೇಡ. ಪೊಟಾಶ್ ತಪ್ಪದೇ ಬಳಸಬೇಕು.

ಜಿಪ್ಸಂ (< 200 ಕೆಜಿ, ಜಿಂಕ್ ಸಲ್ಫೇಟ್ < 5 ಕೆಜಿ), ಬೋರಾನ್ 1-2 ಕೆಜಿ ಎಕರೆವಾರು ಬಳಕೆಯನ್ನು ಬೆಳೆಯ ಮೊದಲ 3-4 ವಾರಗಳೊಳಗೆ ಮಾಡಬೇಕು.

* ಚುಕ್ಕೆ ಲದ್ದಿ ಹುಳು ಸೇರಿದಂತೆ, ವಿವಿಧ ಪೀಡೆಗಳ ಬಾಧೆ ಹತೋಟಿಗೆ ತಜ್ಞರ ಸಲಹೆ ಅನ್ವಯ ಆರಂಭದಿಂದಲೇ ಕ್ರಮ ಕೈಗೊಳ್ಳಬೇಕು.

* ಬೆಳೆಯು ಮೂರು ವಾರದ ಹಂತ ತಲುಪಿದ ನಂತರ ಪೋಷಕಾಂಶ ಭರಿತ ದ್ರಾವಣವನ್ನು ಉಪಯೋಗಿಸಿ, ಬೆಳೆಯು ಅತೀ ತೇವಾಂಶ ಬಾಧೆಗೆ ಈಡಾಗದಂತೆ ಮುನ್ನೆಚ್ಚರಿಕೆ ಅತ್ಯಗತ್ಯ.

* ಪರಿಹಾರ ಎಂದಿದ್ದರೂ ಪರಿಹಾರವೇ ಹೊರತು ಆದಾಯವಾಗಲಾರದು.

* ಬೆಳೆಗಳ ಅಗತ್ಯಕ್ಕೆ ತಕ್ಕಂತೆ ನಿರ್ವಹಣೆ ಮಾಡಬೇಕು. ಬೆಳೆಗಳು ಸಬ್ಸಿಡಿಗಾಗಿ ಕಾಯಲಾರವು.

## ರಾಣೇಬೆನ್ನೂರು : ಶಂಕರಾಚಾರ್ಯರ ಶೋಭಾಯಾತ್ರೆ ಮೆರವಣಿಗೆ



ರಾಣೇಬೆನ್ನೂರು, ಮೇ 10- ಆದಿಗುರು ಶಂಕರಾಚಾರ್ಯರ ಜಯಂತ್ಯುತ್ಸವ ಅಂಗವಾಗಿ ಶುಕ್ರವಾರ ನಗರದ ಕೋಟೆಯಲ್ಲಿ ಶೋಭಾಯಾತ್ರೆ ಮೆರವಣಿಗೆ ನಡೆಯಿತು.

ಜಗದ್ಗುರು ಶಂಕರಾಚಾರ್ಯರ ಭಾವಚಿತ್ರವನ್ನು ಪಾಲಿಕೆಯಲ್ಲಿ ಪ್ರತಿಷ್ಠಾಪಿಸಿ, ಇಲ್ಲಿನ ಶಂಕರ ಮಠದಿಂದ ಆರಂಭವಾದ ಮೆರವಣಿಗೆ ನಗರದ ವಿವಿಧ ಭಾಗಗಳಲ್ಲಿ ಸಂಚರಿಸಿತು.

ಈ ಸಮಯದಲ್ಲಿ ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಎಸ್. ನಾಡಿಗೇರ ಮಾತನಾಡಿ, ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿದ ಮಹಾನ್ ಚೇತನ ಶಂಕರಾಚಾರ್ಯರು, ಉಪನಿಷತ್ತು ಹಾಗೂ ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾಗಿದ್ದಾರೆ. ಇಂತಹ ಆಚಾರ್ಯ ಹಾಕಿಕೊಟ್ಟ ತತ್ವ, ಸಿದ್ಧಾಂತಗಳಲ್ಲಿ ಇಂದಿನ ಯುವ ಪೀಳಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಂಕರಾಚಾರ್ಯರ ಜಯಂತ್ಯುತ್ಸವ ಹಿನ್ನಲೆಯಲ್ಲಿ ಇಲ್ಲಿಯ ಶಂಕರ ಟ್ರಸ್ಟ್ ಕಮಿಟಿ ವತಿಯಿಂದ ಮೇ 11ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಗುರುರಾಜ ನಾಡಿಗೇರ, ಉಮೇಶ ವಿಶ್ವರೂಪ, ವಿ.ವಿ.ಹೊಳೆಬಾಗಿಲ, ಅರುಣ ಮುದ್ರಿ, ಶ್ರೀಪಾದ ಜೋಶಿ, ಗೌರ ವಿಶ್ವರೂಪ, ಗಾಯತ್ರಿ ವಿಶ್ವರೂಪ, ಶ್ರೀರಕ್ಷಾ ದೀಕ್ಷಿತ, ವೀಣಾ ಮುದ್ರಿ, ಶೀಲಾ ವಿಶ್ವರೂಪ ಸೇರಿದಂತೆ ಅನೇಕರು ಮಹಿಳೆಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

## ನಂದಿಗುಡಿ ಗ್ರಾಮದಲ್ಲಿ ಇಂದು ಕಸಾಪ ದತ್ತಿ ಉಪನ್ಯಾಸ

ಶ್ರೀ ನಂದೀಶ್ವರ ಗ್ರಾಮಾಂತರ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಶ್ರೀ ನಂದೀಶ್ವರ ಗ್ರಾಮಾಂತರ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಮತ್ತು ದತ್ತಿ ಉಪನ್ಯಾಸ ಕಾರ್ಯಕ್ರಮವು ಇಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ.

ಉದ್ಘಾಟನೆ : ಎಂ. ಕುಮಾರ್, ಪ್ರಾಸ್ತಾವಿಕ ನುಡಿ: ಎ. ರಿಯಾಜ್ ಆಹ್ಮದ್, ಉಪನ್ಯಾಸ : ಕವಿ ಸಾಬಿರ್ ಅಲಿ, ಅಧ್ಯಕ್ಷತೆ: ಎಸ್.ಪಿ. ಅರುಣ್ ಕುಮಾರ್, ಸನ್ಮಾನ: ಕವಿ ವಿ.ಬಿ. ಕೊಟ್ರೇಶ್. ಮುಖ್ಯ ಅತಿಥಿಗಳು: ಕೆ.ಟಿ. ಶಿವಾನಂದಪ್ಪ, ವಿ. ರಾಜಾ ನಾಯ್ಕ್, ಹೆಚ್.ಎಂ. ಸದಾನಂದ, ಉಪಸ್ಥಿತಿ: ಕಸಾಪ ತಾಲ್ಲೂಕು ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ದತ್ತಿ ದಾನಿಗಳು: ಚಂದ್ರಶೇಖರ್ ಶೆಟ್ಟಿ, ಲಲಿತಮ್ಮ ಡಾ. ಚಂದ್ರಶೇಖರ್, ಶೀಲವತಿ ರಾಮಕೃಷ್ಣ ಮೂರ್ತಿ, ಸ್ವಾಗತ : ಬಿ.ಬಿ. ರೇವಣ್ಣನಾಯ್ಕ್, ಚಿದಾನಂದ ಎಂ. ಕಂಚಿಕೇರಿ, ಖಜಾಂಚಿ ವಿಜಯ ಮಹಾಂತೇಶ್.

## ಬಾಲ್ ಬ್ಯಾಡ್ಮಿಂಟನ್ ಟೂರ್ನಿ ಕ್ಲಾಸಿಕ್ ಬಿಬಿಸಿ ತಂಡ ಪ್ರಥಮ



ದಾವಣಗೆರೆ, ಮೇ 10- ಹರಿಹರ ತಾಲ್ಲೂಕು ಹನಗವಾಡಿಯಲ್ಲಿ ಈಚೆಗೆ ನಡೆದ ಆಹ್ವಾನಿತ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ನಗರದ ಕ್ಲಾಸಿಕ್ ಬಿಬಿಸಿ ತಂಡ ಮೊದಲ ಸ್ಥಾನ ಪಡೆದಿದೆ.

ಫೈನಲ್ಸ್‌ನಲ್ಲಿ ತುಪ್ಪದಹಳ್ಳಿ ತಂಡದ ಮೇಲೆ ಗೆದ್ದು ಆಕರ್ಷಕ ಪಾರಿತೋಷಕ ಹಾಗೂ ಹದಿನೈದು ಸಾವಿರ ರೂ. ನಗದು ಪಡೆದುಕೊಂಡಿದೆ.

ನಾಯಕ ಕುಮಾರಸ್ವಾಮಿ ಹಾಗೂ ಅವರ ಸಹ ಆಟಗಾರರಾದ ಚಂದ್ರಶೇಖರ್, ಮಂಜುನಾಥ್, ಅರುಣ್ ರಾಯ್ಕಾರ್, ಮಧುಸೂದನ್, ಹರೀಶ್ ರೆಡ್ಡಿ, ಶಶಿ ಅವರುಗಳು ಟ್ರೋಫಿ ಗೆಲ್ಲಲು ನೆರವಾದರು. ಹಿರಿಯ ಆಟಗಾರ ಉಮೇಶ್ ಗುಜ್ಜರ್ ತಂಡದ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಪ್ರಸನ್ನಬಾಬು ವೆಂಕಟೇಶ್ವರ ಪ್ರಾವಿಜನಲ್ ಸ್ಟೋರ್ಸ್, ರೇಲ್ವೇ ಗೇಟ್ ಹತ್ತಿರ ಇವರ ಜ್ಞಾಪಕಾರ್ಥವಾಗಿ ಕುಟುಂಬ ವರ್ಗದವರ ಸೇವಾರ್ಥ, ದಾವಣಗೆರೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಲು ಅನುಭವ ಇರುವ 6 ಜನ ಟೈಲರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
96204 02680

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ
30x42 North, 42x38 North, 30x50 South, 50x38 South, 30x52 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಳಿಗೆ ಮಾರಾಟಕ್ಕಿದೆ**
ದಾವಣಗೆರೆಯ ಗಡಿಯಾರ ಕಂಬದ ಬಳಿ ಇರುವ ಕಾವೇರಿ ಬ್ಯಾಗ್ ಶಾಪೆ ಮಳಿಗೆ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ :
74111 63454

**ಮನೆಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆ ಪೂರ್ವ 30x40 ಕೆಳಗೆ 2BHK ಮೇಲೆ ಎರಡು ರೂಂ, 30x50 ಡುಪ್ಲೆಕ್ಸ್, ಶಿವ-ಪಾರ್ವತಿ ಬಡಾವಣೆ ಉತ್ತರ 30x46, ಕೆಳಗೆ 2BHK ಮೇಲೆ ಸಿಂಗಲ್ BHK.
ಐಗೂರು ವಿಜಯಕುಮಾರ್
99457 02495

**ತಕ್ಷಣ ಬೇಕಾಗಿದ್ದಾರೆ**
ಡಿ.ಟಿ.ಪಿ ಹಾಗೂ ಫೋಟೋ ಶಾಪ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
ಸಂಪರ್ಕಿಸಿ :
97428 29451

**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್
81050 40110

**Wanted Lady Teacher**
B.Sc, B.Ed - 1 Post
(For High School)
Contact No :
95358 85997, 90359 16750

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ-ಹರಿಹರದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ ಆಕರ್ಷಕ ಸಂಬಳ ಸೌಲಭ್ಯವಿದೆ. ಸಂಬಳ 6500, 8500
ಸುಭಾಷ್ ಶೆಟ್ಟಿ ಸರ್ವೀಸ್
ವಿನೋಬನಗರ 3ನೇ ಮೇನ್, 1 ಕ್ರಾಸ್ ದಾವಣಗೆರೆ
ಫೋ. : +91 9113053483

**ಬೇಕಾಗಿದ್ದಾರೆ**
ನಮ್ಮ Account Section ಗೆ PUCಯಲ್ಲಿ ಕಾಮರ್ಸ್ ತೆಗೆದುಕೊಂಡು ಟ್ಯಾಲಿ ಆದ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್, ಮಂಡಿಪೇಟೆ, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ-ದಕ್ಷಿಣ ಕಾರ್ನರ್. 40x50 ಉತ್ತರ ಪಶ್ಚಿಮ-ಕಾರ್ನರ್, ಶಿವ-ಪಾರ್ವತಿ ಬಡಾವಣೆಯಲ್ಲಿ 30x54 ಪೂರ್ವ 40 ಅಡಿ ರಸ್ತೆಗೆ ಹೊಂದಿಕೊಂಡು 30x40 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಶಿಕ್ಷಕ / ಶಿಕ್ಷಕಿಯರು ಬೇಕಾಗಿದ್ದಾರೆ**
BA, B.Ed ಮತ್ತು B.Sc, B.Ed ಮಾಡಿರುವ ಇಂಗ್ಲಿಷ್, ಗಣಿತ, ಸಮಾಜ ವಿಜ್ಞಾನ ಬೋಧಿಸುವ ಶಿಕ್ಷಕ / ಶಿಕ್ಷಕಿಯರು ಬೇಕಾಗಿದ್ದಾರೆ.
ಶ್ರೀ ತರಳುಬಾಳು ಆಂಗ್ಲಮಾಧ್ಯಮ ಹಿರಿಯ ಪ್ರಾಥಮಿಕ & ಪ್ರೌಢಶಾಲೆ, ಎಲೆಬೇತೂರು.
91648 67594, 82771 70966

**ಮನೆ ಮರಾಟಕ್ಕೆ ಇದೆ**
ಕೆಟಿಜೆ ನಗರ 15ನೇ ಕ್ರಾಸ್‌ನಲ್ಲಿ 30x40 ಅಡಿ ಅಳತೆಯಲ್ಲಿ ಕಟ್ಟಿಸಿರುವ ಮೂರು ಮನೆಗಳು ಮಾರಾಟಕ್ಕಿವೆ ಹಾಗೂ ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ 2 ಮನೆಗಳು ಬಾಡಿಗೆಗೆ ಇವೆ (ಲಿಫ್ಟ್ ಸೌಲಭ್ಯವಿರುತ್ತದೆ)
96388 17967, 63663-27368

**WANTED**
Accountant with Tally Knowledge.
Drivers
Call :
96060 96695

**We Are Hiring Teachers**
NTT/D.Ed/B.Ed minimum 2 Years & good communicatio skill in Kannada, English, Hindi. **Contact :**
Edu Planet International School
Opp, Swimming pool, MCC `B' Block, Dvg.
76761 81417, 70199 32983

**ಮನೆ ಮಾರಾಟಕ್ಕೆ ಇದೆ**
ದಾವಣಗೆರೆ ಕೆ.ಬಿ. ಬಡಾವಣೆ ಜಾಧವ್ ಆಸ್ಪತ್ರೆ ಸಮೀಪ, 5ನೇ ಕ್ರಾಸ್‌ನಲ್ಲಿ 54x44 ಅಳತೆಯ ಉತ್ತರ-ಪಶ್ಚಿಮ ಕಾರ್ನರ್ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99642 29447
74066 95424

**ಮನೆಗಳು ಮಾರಾಟಕ್ಕಿವೆ**
30x40 East ಹೊಸಮನೆ ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 40x30, 40x30 East ನೂತನ ಕಾಲೇಜ್ ಹಿಂಭಾಗದಲ್ಲಿ ಕೆಳಗಡೆ ಎರಡು ಬೆಡ್‌ರೂಂ ಮನೆ, ಮೇಲುಗಡೆ ನಾಲ್ಕು ಬೆಡ್ ರೂಂ ಮನೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ/ಮಳಿಗೆ ಬಾಡಿಗೆಗೆ ಇದೆ**
ಆಂಜನೇಯ ಬಡಾವಣೆಯಲ್ಲಿ ಸಿಂಗಲ್ ರೂಂ ಬಾಡಿಗೆಗೆ ಇದೆ. ಹಾಗು ಒಂದು ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ
96388 17967
73380 43912

**WANTED**
Audit Assistants 4 posts Female
Qualification : **B.Com Pass or Fail with Computer Knowledge**
**Walk-in-Interview on 11.05.2022 & 12.05.2022 At 10 Am to 6Pm**
**Fayaz Ahammed & Associates**
**Auditor & Tax Consultant**
Room N0 B 11 & 2, Muslim Hostel Shoping Complex, Ambedkar circle, Davanagere. **Mob: 94480 45778**

**Wanted**
B.Com Graduates for Accountant position for a Textile trading company. Good salary and work environment. Walkin interview tomorrow at Sadguru #64 2nd main road, P.J. Extension Davangere-577002
Ph: 97414 48919

**JOB VACANCY**
DATA PROCESSING/LEAD GENERATION EXECUTIVE
QUALIFICATION: Dip. BCA, or Any Technical Degree
SKILLS : Computer Basics (MS Word/ Excel, Browsing, Email Handling)
TIMINGS : Night Shift ( Male Candidates Only )
LOCATION : **E-Mark Technologies,** Vidyanagara, Davanagere
7349129212

**ಮೆಡಿಕಲ್ ಶಾಪ್ ಕೊಡುವುದಿದೆ**
ಒಳ್ಳೆಯ ಲೊಕೇಷನ್‌ನಲ್ಲಿರುವ ಉತ್ತಮ ವ್ಯಾಪಾರವಿರುವ 3ಜನ ಡಾಕ್ಟರ್ಸ್ ಕೂರಲು ಸ್ಥಳಾವಕಾಶ ಇರುವಂತಹ ಮೆಡಿಕಲ್ ಶಾಪ್ ಕೊಡುವುದಿದೆ. ಸಂಪರ್ಕಿಸಿರಿ
70182 49897

**ಜಾಗ ಬಾಡಿಗೆಗೆ ಇದೆ**
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ, ತೆಂಗು, ಮಾವು, ಸಪೋಟ, ಶ್ರೀಗಂಧ, ಬೆಟ್ಟದ ನೆಲ್ಲಿ, ಹೆಬ್ಬೇವು, ಮಹಾ ಘನಿ, ನಿಂಬೆ, ದಾಳಿಂಬೆ, ಗುಲಾಬಿ ಹಾಗೂ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ, ದೊರೆಯುತ್ತದೆ, ಸಂಪರ್ಕಿಸಿರಿ.
ಫೋ. : 94484 39639

**Teachers Wanted Immediately**
SJM English Medium Public School.
MCC A block Dvg.1
B.A B.Ed. English major (02 post)
For more Details contact.
99649 70221

**WANTED**
SALES MAN / DELIVERY MAN
apply or mail your bio data to
PARIMALA COFFEE CO
MANDIPET, DAVANGERE
MAIL: info@parimalacoffee.com
94482 72734

**ವ್ಯವಸಾಯೇತರ ಜಮೀನು ಮಾರಾಟಕ್ಕಿದೆ**
1) ಪೂ, ಪ. 28.6 x113.8 ಉ.ದ (3 ಗುಂಟೆ)
2) ಪೂ, ಪ. 29.7x73.5 ಉ.ದ (2 ಗುಂಟೆ)
10.5 ಅಡಿ ಓಡಾಟಕ್ಕೆ ರಸ್ತೆ ಬಿಟ್ಟಿದೆ. ಸರ್ಕಾರಿ ಪ್ರೌಢಶಾಲೆ ಎದುರು, ನಂದಿಗುಡಿ ಮುಖ್ಯ ರಸ್ತೆ, ಭಾನುವಳ್ಳಿ, ಹರಿಹರ ತಾ. ಸಂಪರ್ಕಿಸಿ :
96119 55366

**ಸೈಟು ಬೇಕಾಗಿದೆ**
ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 30x40 ಅಥವಾ 30x50 ಅಳತೆ ಇರುವ ಸೈಟು ಬೇಕಾಗಿದೆ.
ಸಂಪರ್ಕಿಸಿ :
98809 33630

**ಬೇಕಾಗಿದ್ದಾರೆ**
ಮೆಡ್ ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಅನುಭವವಿರುವ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30 ಜಯನಗರ SSI ಆಸ್ಪತ್ರೆ ರೋಡ್, ದಾವಣಗೆರೆ.
ಫೋ. : 78999 91860

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 1BHK, 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ.
99722 44667
87623 12789

**ಭವಿಷ್ಯ Astrologer**
ಹಂಪನಾಳ್ ಮೋಡಿ ಮಾಂತ್ರಿಕ ಗಿಡ್ಡಪ್ಪ
ನಂಬಿದಲ್ಲಿ ಮೋಸವಿಲ್ಲ. ಭಟ್ಟಂಗಿ ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ.ವಶೀಕರಣ, ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ, ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನಃಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ.
ಇಂದೇ ಕರೆ ಮಾಡಿ : 99807 70791

**ಬೇಕಾಗಿದ್ದಾರೆ.**
SSLC/PUC ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು, ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ & ಡೆಲಿವರಿ ಬಾಯ್ಸ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಮನೆಗಳು ಬಾಡಿಗೆಗೆ ಇವೆ**
ಎಸ್.ಎಸ್. ಹೈಟೆಕ್ ಆಸ್ಪತ್ರೆ ಹತ್ತಿರ, ಪೆಟ್ರೋಲ್ ಬಂಕ್ ಎದುರು ಲಕ್ಷ್ಮಿ ಲೇಔಟ್‌ನಲ್ಲಿ ನೂತನವಾಗಿ ಕಟ್ಟಿಸಿರುವ ಅರುಣಾ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್ ರೂಂ, ಅಟ್ಯಾಚ್ಡ್ ಬಾತ್‌ವುಳ್ಳ 18 ಮನೆಗಳು ಬಾಡಿಗೆಗೆ ಇವೆ.
63663 27368

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**WANTED LADY TEACHERS**
B.Ed - 3 Posts, D.ED - 3 Posts.
NTC or Any Degree - 3 Posts
**Contact : Vidya Vikas Convent**
Behind Aarykae Hospital, K.T.J Nagar, Davanagere.
M : 99866 17235

**ಹೊಸ ಮನೆಗಳು ಬಾಡಿಗೆಗೆ ಇವೆ**
ಶಿವಕುಮಾರ ಬಡಾವಣೆಯಲ್ಲಿ 2BHK, 3BHK ಹೊಸ ಮನೆಗಳು ಬಾಡಿಗೆಗೆ ಇವೆ.
Agent
95385 65909

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**New Commercial Building For Rent**
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

**CHANGE OF NAME**
I **Akshay Kumar K.M.** S//o **Vishwanatha Swamy K.M.,** 28 Years resident @ # 472, 3rd ward Shadaksharappa Compound, Patel Nagara, 5th Cross, Hospet, Bellary - 583 201. above name mentioned in Aadhar and in School records my name as **AKSHAYA KUMAR.** Hence I Declare that above two names are me only and none other use. Further I Continued my name as Akshay Kumar K.M. before Notary Davangere on 10.05.2022.
Sd/-**AKSHAY KUMAR K.M.**

**ಮನೆ ಬಾಡಿಗೆಗೆ ಇದೆ**
ಕೆ.ಬಿ ಬಡಾವಣೆ, ತ್ರಿಶೂಲ್ ಟಾಕೀಸ್ ರೋಡಿನಲ್ಲಿ ಉತ್ತರ ದಿಕ್ಕಿನ ವಾಸ್ತು ಪ್ರಕಾರ 3BHK ಮನೆ 2ನೇ ಫ್ಲೋರ್‌ನಲ್ಲಿ ಬಾಡಿಗೆಗೆ ಇದೆ. (ಆಫೀಸಗೂ ಸಹ ಇದೆ.)
94483 39231, 77951 49297

**Lost Passport**
I Shravanabelagola Venkatesh S/o Akashigowda Recident @ 1668 Near Durgambika School, Saraswati Nagar, Nittuvalli Post, Davanagere-577004 bearing my Passport No **A2409167** was lost Near BIET College Road, vidyanagara, Davanagere. please Contact below My Cell
No. 97430 06670

**WORK FROM HOME**
Male/Female, Full / Part time Hand writing work. Small Letter to Capital Letter Earn Per month 12,000/- to 15,000/-
89718 52431

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ-ದಕ್ಷಿಣ ಕಾರ್ನರ್. 40x50 ಉತ್ತರ ಪಶ್ಚಿಮ-ಕಾರ್ನರ್, ಶಿವ-ಪಾರ್ವತಿ ಬಡಾವಣೆಯಲ್ಲಿ 30x54 ಪೂರ್ವ 40 ಅಡಿ ರಸ್ತೆಗೆ ಹೊಂದಿಕೊಂಡು 30x40 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**NEET K-CET CRASH COURSE**
Class Timing 10am to 4-30pm | From 11-05-2022
SAMRUDDHI ACADEMY
DAVANGERE
6364640296

**ಮಳಿಗೆಗಳು ಬಾಡಿಗೆಗೆ ಇವೆ**
ಬ್ಯಾಂಕ್, ಕ್ಲಿನಿಕ್, ಡಾಬಾ, ಹೋಟೆಲ್ ಮತ್ತು ಇತರೆಗಳಿಗೆ ಯೋಗ್ಯವಾದ ಮಳಿಗೆಗಳು ಬಾಡಿಗೆಗೆ ಇವೆ.
ಗ್ರೌಂಡ್ ಫ್ಲೋರ್ 17x58
ಫಸ್ಟ್ ಫ್ಲೋರ್ 22x58
ಈ ಅಡಿ ಅಳತೆಯ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಸ್ಥಳ : ಹಳೆ ಪಿ.ಬಿ ರಸ್ತೆ, ಪಿಡಬ್ಲ್ಯೂಡಿ ಆಫೀಸ್ ಎದುರು, ಹರಿಹರ.
ಸಂಪರ್ಕಿಸಿ :
99013 55240, 87224 80268

**ಮನೆ ಬಾಡಿಗೆಗೆ**
ಉತ್ತಮ್ ಚಂದ್ ಲೇಔಟ್ ಹತ್ತಿರ ಶನೇಶ್ವರ ದೇವಸ್ಥಾನ ಮುಂಭಾಗ ನೂತನವಾಗಿ ನಿರ್ಮಿಸಿರುವ ಸೋಲಾರ್, ಬೋರ್‌ವೆಲ್ ವ್ಯವಸ್ಥೆ ಇರುವ ಸಿಂಗಲ್ ಬೆಡ್‌ರೂಂ ಮನೆಗಳು ಬಾಡಿಗೆಗೆ ಇವೆ.
(ಸಸ್ಯಹಾರಿಗಳಿಗೆ)
96202 88314

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಗ್ರೀನ್ ಪಾರ್ಕ್ ಹೋಟೆಲ್ ನಲ್ಲಿ ಕೆಲಸ ಮಾಡಲು ಸಪ್ಲೈಯರ್ ಮತ್ತು ವೇಯ್ಟರ್ ಬೇಕಾಗಿದ್ದಾರೆ.
ಸಂಪರ್ಕಿಸಿ
72040 20706

**WANTED**
Receptionist - 02
Pooja Diagnostics and health care Research Center
P.J. Extenstion, 8th Main, 8th Cross
98443 26560
08192 232075

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 90080 67049

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**Wanted Teachers**
BA., BEd.,- Kannada Major-1
BA., BEd.,-English Major-1
BSc., B.Ed-Mathametics-1
B.A. B.Ed.,-Hindi Major-1, NTC-02
Computer Teacher-1, P.E. Teacher-1 C.P.Ed., B.P.Ed
**Jnanabharathi Vidyalaya**
60 feet Ring Road, Nittuvalli, Davangere.Office Time : 10 am to 1 Pm
90087 35218, 99003 57915

# ಉದ್ಯೋಗಾಧಾರಿತ ಶಿಕ್ಷಣ ಕಲಿಸಿ

## ಶಿಕ್ಷಕರಿಗೆ ಸಂಗೀತ ನಿರ್ದೇಶಕ ವಿ.ಮನೋಹರ್ ಸಲಹೆ



ದಾವಣಗೆರೆ, ಮೇ 10- ಮಕ್ಕಳಲ್ಲಿರುವ ಸುಪ್ತ ಪ್ರತಿಭಾ ಪ್ರದರ್ಶನಕ್ಕೆ ಬೇಸಿಗೆ ಶಿಬಿರಗಳು ಸೂಕ್ತ ವೇದಿಕೆಯಾಗಬಲ್ಲವು. ಪ್ರತಿಭೆಯನ್ನು ಹೆಕ್ಕಿ ತೆಗೆಯುವ ಕೆಲಸವನ್ನು ಶಿಕ್ಷಕರು ಮತ್ತು ಪೋಷಕರು ಮಾಡಬೇಕಾಗಿದೆ ಎಂದು ಹೆಸರಾಂತ ಸಂಗೀತ ನಿರ್ದೇಶಕ ವಿ. ಮನೋಹರ್ ಹೇಳಿದರು.

ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಅನ್ವೇಷಕರು ಆರ್ಟ್ ಫೌಂಡೇಶನ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಅನ್ವೇಷಕರು ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ವಿದ್ಯಾವಂತರನ್ನಾಗಿ, ಶಿಸ್ತಿನ ಸಿಪಾಯಿಗಳನ್ನಾಗಿ ಮಾಡುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಪ್ರತಿಯೊಬ್ಬ ಮಗುವಿನಲ್ಲೂ ಪ್ರತಿಭೆ ಅಡಗಿರುತ್ತದೆ. ಅದನ್ನು ಗುರುತಿಸಿ, ಹೊರ ತರುವ ಕೆಲಸವನ್ನು ಶಿಕ್ಷಕರು ಮಾಡಬೇಕಾಗಿದೆ ಎಂದರು.

ಇಂದಿನ ತಾಂತ್ರಿಕ ಯುಗದಲ್ಲಿ ಮೊಬೈಲ್ ಬಳಕೆ ಹೆಚ್ಚಾಗುತ್ತಿದ್ದು, ಸಾಮಾಜಿಕ ಜಾಲತಾಣದ ಮೂಲಕ ವ್ಯಕ್ತಿ ಜನಪ್ರಿಯಗೊಳ್ಳಲು ಸಾಧ್ಯವಿದೆ. ಮಕ್ಕಳನ್ನು ಸರಿದಾರಿಯಲ್ಲಿ ಮುನ್ನಡೆಸುವ ಅಗತ್ಯವಿದೆ. ಗುರುವಿನ ಮಾರ್ಗದರ್ಶನ ಮುಖ್ಯವಾಗಿದೆ ಎಂದು ಹೇಳಿದರು.

ಮಕ್ಕಳು ಕೇವಲ ಪುಸ್ತಕಗಳನ್ನು ಓದುವುದಕ್ಕೆ ಮಾತ್ರ ಸೀಮಿತವಾಗದೇ ನಿಜ ಜೀವನದ ಪಾಠವನ್ನು ತಿಳಿಯುವ ಅಗತ್ಯವಿದೆ. ಬಹಳಷ್ಟು ರೈತರು ಮತ್ತು ಅವರ ಮಕ್ಕಳು ಕೃಷಿಯಿಂದ ವಿಮುಖರಾಗಿ ನಗರದತ್ತ ಮುಖ ಮಾಡುತ್ತಿದ್ದಾರೆ. ಕೃಷಿ ಚಟುವಟಿಕೆಗಳನ್ನು ನಿರ್ವಹಿಸಲು ಕೆಲಸಗಾರರೇ ಇಲ್ಲದಂತಾಗಿದೆ. ಕೃಷಿ, ಹೈನುಗಾರಿಕೆ ಸೇರಿದಂತೆ ಉದ್ಯೋಗಾಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕಾಗಿದೆ ಎಂದು ಸಲಹೆ ನೀಡಿದರು.

ಮಕ್ಕಳಿಗೆ ಕಷ್ಟದ ಅರಿವಾಗಬಾರದೆಂದು ಅವರನ್ನು ಬರೀ ಸುಖದಲ್ಲಿಯೇ ಬೆಳೆಸಿದರೆ ಮುಂದೆ ಅವರು ತುಂಬಾ ತೊಂದರೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ಮಕ್ಕಳಿಗೆ ಕಷ್ಟವನ್ನು ಅರ್ಥಮಾಡಿಸಬೇಕಾಗಿದೆ ಎಂದರು.

ಸಮಾರೋಪ ನುಡಿಗಳನ್ನಾಡಿದ ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕರೂ, ಜಾನಪದ ತಜ್ಞರೂ ಆದ ಡಾ. ಎಂ.ಜಿ. ಈಶ್ವರಪ್ಪ ಅವರು, ಮಕ್ಕಳನ್ನು ಸದಾ ಕ್ರಿಯಾಶೀಲರನ್ನಾಗಿ, ಸೃಜನಶೀಲರನ್ನಾಗಿಡಲು ಬೇಸಿಗೆ ಶಿಬಿರಗಳು ಸಹಕಾರಿಯಾಗಿವೆ. ನಾಟಕ, ಹಾಡು, ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಭಾವೀ ಪ್ರಜೆಯಾಗಿ ಹೊರ ಹೊಮ್ಮಲು ಸಾಧ್ಯವಿದೆ ಎಂದರು.

ಟಿವಿಗಳಲ್ಲಿ ಪ್ರಸಾರವಾಗುವ ಧಾರಾವಾಹಿ ಸೇರಿದಂತೆ ಕೆಲವು ಕಾರ್ಯಕ್ರಮಗಳಲ್ಲಿ ಪರಸ್ಪರ ದ್ವೇಷ, ಅಸೂಯೆ, ಅನಾಚಾರಗಳ ಬಗ್ಗೆ ಬಿತ್ತರಗೊಳ್ಳುತ್ತಿವೆ. ಆಕಾರವಿಲ್ಲದ ಬರೀ ವಿಕಾರ, ದುರ್ವಿಕಾರವಾಗಿರುವ ಸನ್ನಿವೇಶಗಳನ್ನು ಕಾಣುತ್ತೇವೆ. ಇವು ಮಕ್ಕಳ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿರುತ್ತವೆ. ಆರೋಗ್ಯಕರ ಮಕ್ಕಳನ್ನು ಕೊಡಲು ಶಿಬಿರಗಳು ಸಹಕಾರಿಯಾಗಿವೆ ಎಂದು ಹೇಳಿದರು.

ಹೆಗ್ಗೋಡು ನೀನಾಸಂ ರಂಗ ಶಿಕ್ಷಣ ಕೇಂದ್ರದ ವಿಶ್ರಾಂತ ಪ್ರಾಂಶುಪಾಲ ಕೆ.ಜಿ. ಮಹಾಬಲೇಶ್ವರ ಮಾತನಾಡಿ, ಮಕ್ಕಳ ಬದುಕೇ ರಂಗು ರಂಗಿನಿಂದ ಕೂಡಿರತಕ್ಕದ್ದು, ಶಾಂತಿಯ ಗುಲಾಬಿಯ ಹಸಿರು ತೋಟವಿದ್ದಂತೆ ಎಂದರು.

ಸಾಹಿತಿಯೂ ಆದ ನಿರ್ದೇಶಕ ಎನ್.ಎಸ್. ಶಂಕರ್, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಹೆಚ್. ಅರಳಗುಪ್ಪಿ ಮಾತನಾಡಿದರು.

ರಂಗಕರ್ಮಿಗಳೂ, ಹಿರಿಯ ಪತ್ರಕರ್ತರೂ ಆದ ಬಾ.ಮ. ಬಸವರಾಜಯ್ಯ, ಬಿಇಎ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಜಿ.ಎಸ್. ರವಿ, ನೀವು - ನಾವು ತಂಡದ ಎಸ್.ಎಸ್. ಸಿದ್ಧರಾಜ್, ಶಂಭುಲಿಂಗಪ್ಪ ಮತ್ತಿತರರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಕೆ.ಜಿ. ಮಹಾಬಲೇಶ್ವರ ನಿರ್ದೇಶನದ ಕುಮಾರವ್ಯಾಸ ಭಾರತದ 'ಕರ್ಣ ಭೇದ' ವಾಚನವನ್ನು ಶಿಬಿರದ ಮಕ್ಕಳು ಪ್ರಸ್ತುತಪಡಿಸಿದರು. ಕಾರ್ಯಕ್ರಮದ ನಂತರ ರಂಗಕರ್ಮಿ ಎಸ್.ಎಸ್. ಸಿದ್ದರಾಜು ನಿರ್ದೇಶನದ ಬಿ.ವಿ. ಕಾರಂತರ 'ಪಂಜರ ಶಾಲೆ' ನಾಟಕವನ್ನು ಪ್ರದರ್ಶಿಸಲಾಯಿತು.

## ಇಂದು ಶ್ರೀಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ

ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಶ್ರೀಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಶ್ರೀ ಸ್ವಾಮಿಯ 23 ನೇ ವರ್ಷದ ಬ್ರಹ್ಮ ರಥೋತ್ಸವವು ಇಂದು ಬೆಳಿಗ್ಗೆ 11.45 ಕ್ಕೆ ನೆರವೇರಲಿದೆ ಎಂದು ದೇವಸ್ಥಾನ ಕಮಿಟಿ ತಿಳಿಸಿದೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣಾ ಶಿಬಿರ

ಸಿದ್ಧಗಂಗಾ ಹೆಲ್ತ್ ಸೆಂಟರ್ ವತಿಯಿಂದ ಇಂದು ಮಧ್ಯಾಹ್ನ 1.30 ರಿಂದ ಸಿದ್ಧಗಂಗಾ ಹೆಲ್ತ್ ಸೆಂಟರ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 7892295142.

# ಇ-ಇಂಡೆಂಟ್ ಪದ್ಧತಿಗೆ ಮದ್ಯ ಮಾರಾಟಗಾರರ ವಿರೋಧ



ದಾವಣಗೆರೆ, ಮೇ 10- ಪಾನೀಯ ನಿಗಮದಲ್ಲಿ ಪ್ರಾರಂಭ ಮಾಡಲಾಗಿರುವ ಇ-ಇಂಡೆಂಟ್ ಪದ್ಧತಿಯನ್ನು ಸರಳೀಕೃತಗೊಳಿಸುವಂತೆ ಒತ್ತಾಯಿಸಿ ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ ಅಬಕಾರಿ ಉಪ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಮದ್ಯ ಮಾರಾಟಗಾರರ ಸಂಘ ಅಥವಾ ಯಾವುದೇ ಸನ್ನದುದಾರರೊಂದಿಗೆ ಚರ್ಚೆ ನಡೆಸದೇ ಏಕಾ ಏಕಿ ಇ-ಇಂಡೆಂಟ್ ಪದ್ಧತಿಯನ್ನು ಜಾರಿ ಮಾಡಿರುವುದರಿಂದ ಸನ್ನದುದದಾರರಿಗೆ ತೊಂದರೆಯಾಗಿದೆ ಎಂದು ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಜೆ.ಈಶ್ವರ್ ಸಿಂಗ್ ಕವಿತಾಳ ಆರೋಪಿಸಿದರು.

27-28 ಸಾವಿರ ಕೋಟಿ ವಹಿವಾಟು ನಡೆಸುವ ಉದ್ದಿಮೆ ಬಗ್ಗೆ ಒಂದು ರಾತ್ರಿಯ ನಿರ್ಧಾರದಿಂದ ನಮ್ಮನ್ನು ಬೀದಿಯಲ್ಲಿ ನಿಲ್ಲಿಸಿದಂತಾಗಿದೆ. ಬಾಂಬೆ ಬಾರ್ ಗಳಲ್ಲಿ ನೃತ್ಯ ಮಾಡುವವರಿಗಿಂತ ಕಡೆಯಾಗಿದೆ ನಮ್ಮ ಪರಿಸ್ಥಿತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಶೇ.70ರಷ್ಟು ಜನರಿಗೆ ಇಂಡೆಂಟ್ ಹಾಕುವ ಜ್ಞಾನವಿಲ್ಲ. ಪೇಪರ್ ಕೆಲಸ ಕಡಿಮೆ ಮಾಡುವ ನೆಪದಲ್ಲಿ ಸನ್ನದುದಾರರನ್ನು ಬಲಿಕೊಡಲಾಗುತ್ತಿದೆ ಎಂದು ಹೇಳಿದರು.

ರಾಜ್ಯದಲ್ಲಿ ಆದಾಯ ತರುವಲ್ಲಿ ದ್ವಿತೀಯ ಸ್ಥಾನದಲ್ಲಿರುವ ಈ ಬೃಹತ್ ಉದ್ದಿಮೆಯನ್ನು ಪ್ರತಿ ವರ್ಷ ಏನಾದರೊಂದು ಕಾನೂನು ಬದಲಾವಣೆ ತಂದು, ವಿನಾಕಾರಣ ತೊಂದರೆ ನೀಡಲಾಗುತ್ತದೆ. ಕೂಡಲೇ ಇಂಡೆಂಟ್ ಪದ್ಧತಿ ಹಿಂಪಡೆದು ಈ ಹಿಂದೆ ಇರುವ ಸರಳ ಇಂಡೆಂಟ್ ಪದ್ಧತಿ ಜಾರಿಗೊಳಿಸಿ ರಾಜ್ಯದ ಸನ್ನದುದಾರರಿಗೆ ಅನುಕೂಲ ಮಾಡಿಕೊಡುವಂತೆ ಅವರು ಮನವಿ ಮಾಡಿದರು.

ಮಹೇಶ್ ಶೆಟ್ಟಿ ಆರ್. ಮಾತನಾಡಿ, ಟೆಂಡರ್‌ಗೆ ವಿರೋಧವಿಲ್ಲ. ಆದರೆ ತಾಂತ್ರಿಕ ದೋಷಗಳಿಂದ ಕೂಡಿದೆ. ಮೂರ್ನಾಲ್ಕು ದಿನಗಳು ಬ್ಯಾಂಕ್ ರಜೆ ಬಂದರೆ ದಾಸ್ತಾನು ಪಡೆಯಲು ನಮಗೆ ಸಮಸ್ಯೆಯಾಗುತ್ತದೆ. ಬ್ರಾಂಡ್‌ಗಳ ಕೋಡ್ ನಂಬರ್ ಸಮರ್ಪಕವಾಗಿ ನಮೂದಾಗಿಲ್ಲ. ವಿದ್ಯುತ್ ವ್ಯತ್ಯಯವಾದಾಗ ಇಂಡೆಂಟ್ ಹಾಕಲು ತೊಂದರೆಯಾಗುತ್ತದೆ. ತಾಂತ್ರಿಕ ದೋಷಗಳನ್ನು ಸರಿಪಡಿಸಿ ನೂತನ ಪದ್ಧತಿ ಅಳವಡಿಸುವಂತೆ ಒತ್ತಾಯಿಸಿದರು.

ರಾಮು ಚನ್ನಗಿರಿ ಮಾತನಾಡಿ, ಮೊಬೈಲ್ ಇದ್ದ ಮಾತ್ರಕ್ಕೆ ಎಲ್ಲರೂ ಇಂಡೆಂಟ್ ಹಾಕುವಷ್ಟು ವಿದ್ಯಾವಂತರಾಗಿರುವುದಿಲ್ಲ. ಗ್ರಾಮೀಣ ಭಾಗದಲ್ಲಿ ಸಾಕಷ್ಟು ಸಮಸ್ಯೆಗಳಿವೆ ಎಂದರು.

ಬಾತಿ ಶಂಕರ್ ಮಾತನಾಡಿ, ಅಧಿಕಾರಿಗಳು ಎಸಿ ಕೊಠಡಿಯಲ್ಲಿ ಕುಳಿತು ಕಾನೂನು ಮಾಡಿದರೆ ಸಾಲದು. ಹಳ್ಳಿಗಳ ಕಡೆ ಬಂದು ಸಮಸ್ಯೆಗಳನ್ನು ಆಲಿಸಬೇಕು. ವ್ಯವಹಾರವೇ ರಾತ್ರಿ 9 ಗಂಟೆಯಿಂದ ಆರಂಭವಾಗುತ್ತದೆ.

ಆ ವೇಳೆ ಇಂಟೆಂಡ್ ಹಾಕಲು ಹೇಗೆ ಸಾಧ್ಯ? 20 ರಿಂದ 30 ಕಿ.ಮೀ. ದೂರದಲ್ಲಿ ಬ್ಯಾಂಕ್‌ಗಳಿರುತ್ತವೆ. ಹಣ ಸಂದಾಯ ಮಾಡಲೂ ಕಷ್ಟವಾಗುತ್ತದೆ ಎಂದು ಅವಲತ್ತುಕೊಂಡರು.

ಬಿ.ಎನ್. ಅನಂತಕುಮಾರ್, ಹೆಚ್.ಕೆ. ಹೇಮಣ್ಣ, ಎಂ. ಉಮೇಶ್, ಚಂದ್ರಣ್ಣ, ದೇವರಾಜ್, ಶ್ರೀನಾಥ್, ವಿನಾಯಕ, ಕೆ.ಎಸ್. ಸತೀಶ್, ನಿಖಿಲ್ ಶೆಟ್ಟಿ, ಹರೀಶ್, ಶಿವಸ್ವಾಮಿ ಜಗಳೂರು ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಮದ್ಯ ಮಾರಾಟಗಾರರ ಹಿತ ಕಾಯಲು ಸರ್ಕಾರ ಬದ್ಧ

### ಅಬಕಾರಿ ಉಪ ಆಯುಕ್ತ ಶಿವಪ್ರಸಾದ್

ರಾಜ್ಯ ಸರ್ಕಾರಕ್ಕೆ ಅತಿ ಹೆಚ್ಚು ಆದಾಯ ತರುವ ಎರಡನೇ ಸ್ಥಾನದಲ್ಲಿರುವ ಮದ್ಯ ಮಾರಾಟಗಾರರ ಹಿತ ಕಾಯಲು ಸರ್ಕಾರ ಬದ್ಧವಾಗಿದೆ. ನಿಮ್ಮ ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಅಬಕಾರಿ ಉಪ ಆಯುಕ್ತ ಶಿವಪ್ರಸಾದ್ ಭರವಸೆ ನೀಡಿದರು.

ಜಿಲ್ಲಾ ಮದ್ಯ ಮಾರಾಟಗಾರರ ಸಂಘದಿಂದ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಹೆಚ್ಚು ತೆರಿಗೆ ಕಟ್ಟುವ ಮೂಲಕ ಸರ್ಕಾರಕ್ಕೆ ಸಹಕರಿಸುತ್ತಿದ್ದೀರಿ. ಸರ್ಕಾರವೂ ಸಹ ನಿಮ್ಮ ಹಿತಕ್ಕಾಗಿ ಕಾಲ ಕಾಲಕ್ಕೆ ಸಾಕಷ್ಟು ಬದಲಾವಣೆ ತರುತ್ತಿದೆ. ಈ ಬದಲಾವಣೆಗಳಲ್ಲಿ ಇ-ಇಂಡೆಂಟ್ ಪದ್ಧತಿಯೂ ಒಂದಾಗಿದೆ ಎಂದರು.

ಮೊದಲು ಇಂಡೆಂಟ್ ಹಾಕಲು ಸರದಿಯಲ್ಲಿ ನಿಲ್ಲಬೇಕಾಗಿತ್ತು. ಮೊದಲು ಬಂದವರಿಗೆ ಸ್ಟಾಕ್. ಕೊನೆಗೆ ಬಂದವರಿಗೆ ನೋ ಸ್ಟಾಕ್ ಎಂಬ ಆರೋಪಗಳಿದ್ದವು. ಆದರೆ ಇ-ಇಂಡೆಂಟ್ ಪದ್ಧತಿಯಿಂದ ಆ ಸಮಸ್ಯೆ ನಿವಾರಣೆ ಯಾಗಿದೆ. ಸಂಜೆ 9 ರಿಂದ ಬೆಳಿಗ್ಗೆ 9ರವರೆಗೆ ಇಂಡೆಂಟ್ ವ್ಯವಸ್ಥೆ ಇದೆ. ಸಮಯವಿದ್ದಾಗ ಮನೆಯಲ್ಲಿಯೇ ಇಂಡೆಂಟ್ ಹಾಕಬಹುದು ಎಂದರು.

ಹೊಸ ವ್ಯವಸ್ಥೆ ಜಾರಿಗೆ ತರುವ ವೇಳೆ ಆರಂಭದಲ್ಲಿ ಕೆಲ ಅಡೆತಡೆಗಳಿರುತ್ತವೆ. ತಾಂತ್ರಿಕ ದೋಷಗಳ ನಿವಾರಣೆಗೆ ಕಾಲ ಕ್ರಮೇಣ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ. ಇಂಡೆಂಟ್ ಹಾಕುವ ಕುರಿತು ಈಗಾಗಲೇ ಸನ್ನದುದಾರರಿಗೆ ಅರಿವು ಮೂಡಿಸಲಾಗಿದೆ. ಬದಲಾದ ವ್ಯವಸ್ಥೆಗೆ ಹೊಂದಿಕೊಳ್ಳಬೇಕು ಎಂದರು.

ಸನ್ನದುದಾರರು ವಾರಕ್ಕಾಗುವಷ್ಟು ದಾಸ್ತಾನನ್ನು ಮುಂಚಿತವಾಗಿಯೇ ಹೊಂದಲು ಅವಕಾಶವಿದೆ. ನಂತರ ದಾಸ್ತಾನು ಖಾಲಿಯಾದಾಗ ಆರ್ಥಿಕ ಸ್ಥಿತಿಗನುಗುಣವಾಗಿ ಇಂಡೆಂಟ್ ಸಲ್ಲಿಸಬಹುದು ಎಂದು ಸಲಹೆ ನೀಡಿದ ಅವರು, ಬ್ರಾಂಡ್ ಕೋಡ್ ಹಾಗೂ ಉಳಿದ ಸಮಸ್ಯೆಗಳ ಬಗ್ಗೆ ನಿಗಮದ ಗಮನಕ್ಕೆ ತರಲಾಗಿದೆ. ಆದಷ್ಟು ಬೇಗ ಸಮಸ್ಯೆಗಳು ಪರಿಹಾರವಾಗಲಿವೆ ಎಂದು ಹೇಳಿದರು.

# ಮಾಜಿ ಪ್ರಧಾನಿ ನೌಕಾ ನೆಲೆಗೆ ಪಲಾಯನ

(1ನೇ ಪುಟದಿಂದ) ಹಿಂಸಾಚಾರದಲ್ಲಿ 14 ಮಾಜಿ ಸಚಿವರು, 18 ಶಾಸಕರು ಹಾಗೂ ರಾಜಪಕ್ಷೆ ಕುಟುಂಬ ಬೆಂಬಲಿಸುವ ಹಲವು ನಾಯಕರ ಮನೆಗಳಿಗೆ ಬೆಂಕಿ ಹಚ್ಚಲಾಗಿತ್ತು. ರಾಜಪಕ್ಷೆ ಪೂರ್ವಿಕರು ಹಂಬಂಟೋಟಾದಲ್ಲಿ ಹೊಂದಿರುವ ಮನೆಯನ್ನೂ ಸುಟ್ಟು ಹಾಕಲಾಗಿತ್ತು.

ಕುರುಂಗೆಲಾದಲ್ಲಿರುವ ಪ್ರಧಾನಿ ಮಹಿಂದ ಮನೆಯನ್ನೂ ಸುಟ್ಟು ಹಾಕಲಾಗಿದೆ. ಘರ್ಷಣೆಗಳಲ್ಲಿ ಎಂಟು ಜನ ಸಾವನ್ನಪ್ಪಿದ್ದು, 249 ಜನ ಗಾಯಗೊಂಡಿದ್ದಾರೆ.

ರಾಜಪಕ್ಷೆ ಬೆಂಬಲಿಗರು ದೇಶ ಬಿಟ್ಟು ಓಡಿ ಹೋಗುವುದನ್ನು ತಡೆಯಲು ಸರ್ಕಾರ ವಿರೋಧಿ ಪ್ರತಿಭಟನಾಕಾರರು ಭಂಡಾರ ನಾಯಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಚೆಕ್‌ಪೋಸ್ಟ್ ಒಂದನ್ನೂ ಸ್ಥಾಪಿಸಿದ್ದಾರೆ.

ಪ್ರಸಕ್ತ ಪರಿಸ್ಥಿತಿ ಕುರಿತು ಚರ್ಚಿಸಲು ಅಧ್ಯಕ್ಷ ಗೊಟಬಯ ರಾಜಪಕ್ಷೆ ಅವರು ಶಾಸನಸಭೆಯ ಅಧಿವೇಶನ ಕರೆಯುವಂತೆ ಸ್ಪೀಕರ್ ಮಹಿಂದ ಅಬೆಯವರ್ಧನೆ ಸಲಹೆ ನೀಡಿದ್ದಾರೆ. ಪ್ರಸಕ್ತ ಪ್ರಧಾನ ಮಂತ್ರಿ ಹಾಗೂ ಸರ್ಕಾರ ಇಲ್ಲದ ಕಾರಣ ಎಲ್ಲ ಅಧಿಕಾರ ಗೊಟಬಯ ಕೈ ಸೇರಿದೆ. ಅಧಿವೇಶನದ ಬಗ್ಗೆ ಅವರೇ ನಿರ್ಧರಿಸಬೇಕಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಪ್ರತಿಪಕ್ಷದ ನಾಯಕ ಸಜಿತ್ ಪ್ರೇಮದಾಸ, ದೇಶದಲ್ಲಿ ಈಗ ಉಂಟಾಗಿರುವ ಪರಿಸ್ಥಿತಿಗೆ ಅಧ್ಯಕ್ಷ ಗೊಟಬಯ ಹಾಗೂ ಅವರ ಸರ್ಕಾರ ಕಾರಣ. ತಕ್ಷಣವೇ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

# ಸ್ಪೀಕರ್ ಮಾರ್ಗಸೂಚಿ ಪ್ರಕಟ

(1ನೇ ಪುಟದಿಂದ) ನಿಯಂತ್ರಣ ಮಂಡಳಿಯ ಸದಸ್ಯರೊಬ್ಬರು ಸಮಿತಿಯಲ್ಲಿರುತ್ತಾರೆ.

ಉಳಿದೆಡೆ ಡಿ.ವೈ.ಎಸ್.ಪಿ., ತಹಶೀಲ್ದಾರ್ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರತಿನಿಧಿ ಒಳಗೊಂಡ ಸಮಿತಿ ಅನುಮತಿ ನೀಡಲಿದೆ.

ಸರ್ಕಾರದ ಮಾರ್ಗಸೂಚಿ ಲೌಡ್‌ಸ್ಪೀಕರ್ ಬಳಸುವ ಎಲ್ಲರಿಗೂ ಅನ್ವಯವಾಗಲಿದೆ. ಈ ಕುರಿತ ಸರ್ಕಾರಿ ಆದೇಶ ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ತಿಳಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪರಿಸರ ಖಾತೆ ಸಚಿವ ಆನಂದ್ ಸಿಂಗ್, ಧಾರ್ಮಿಕ ಸಂಸ್ಥೆಗಳು ನಿಯಮಗಳನ್ನು ಪಾಲಿಸಬೇಕು. ನಿಯಮ ಉಲ್ಲಂಘಿಸಿದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ಸರ್ಕಾರದ ಕ್ರಮವನ್ನು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಸ್ವಾಗತಿಸಿದ್ದಾರೆ.

## ಹಿರೇಕೋಗಲೂರಿನಲ್ಲಿ ಇಂದು ಡಾ. ಕೆ.ಜಿ. ಬಸವರಾಜಪ್ಪ ನೆನಪು

ಲಿಂ. ಹೊಸಮನೆ ಡಾ. ಕೆ.ಜಿ. ಬಸವರಾಜಪ್ಪ ಒಂದು ನೆನಪು ಹಾಗೂ ಅಭಿನಂದನಾ ಸಮರಂಭವು ನಾಡೋಜ ಡಾ. ಎಂ. ಚಿದಾನಂದ ಮೂರ್ತಿ ಸಭಾ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಶಿಕ್ಷಣ ತಜ್ಞ ಡಾ. ಹೆಚ್.ವಿ. ವಾಮದೇವಪ್ಪ ಅವರು, ಡಾ. ಎಂ. ಚಿದಾನಂದ ಮೂರ್ತಿ ಸಾಹಿತ್ಯ ಪ್ರತಿಷ್ಠಾನದ ಅಧ್ಯಕ್ಷ ಹೆಚ್. ಯು. ಮಲ್ಲಿಕಾರ್ಜುನ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಲಿಂ. ಡಾ. ಕೆ.ಜಿ. ಬಸವರಾಜಪ್ಪ ಅವರ ಭಾವಚಿತ್ರವನ್ನು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಅನಾವರಣಗೊಳಿಸುವರು. ಚನ್ನಗಿರಿ ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಎಂ.ಬಿ.ನಾಗರಾಜ್ ಕಾಕನೂರು ನುಡಿ ನಮನ ಸಲ್ಲಿಸುವರು. ಮುಖ್ಯ ಅತಿಥಿಗಳು : ರವಿಚಂದ್ರ, ಶ್ರೀಮತಿ ದ್ರಾಕ್ಷಾಯಣಮ್ಮ ಕೆ.ಜಿ. ಬಸವರಾಜಪ್ಪ, ಮಾಗನೂರು ಸಂಗಮೇಶ್ವರ ಗೌಡ್ರು, ಎಸ್. ಶರಣಪ್ಪ, ಕೆ.ಎಸ್. ಗಿರೀಶ್, ಶ್ರೀಮತಿ ಸುಮಂಗಲ, ಶ್ರೀಮತಿ ಎಂ.ಜಿ. ಶಶಿಕಲಾ ಮೂರ್ತಿ, ಕೆ. ಸಿರಾಜ್ ಅಹ್ಮದ್.

ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಾಡೋಜ ಡಾ. ಎಂ. ಚಿದಾನಂದ ಮೂರ್ತಿ ಸಾಹಿತ್ಯ ಪ್ರತಿಷ್ಠಾನದ ಸಹಯೋಗದೊಂದಿಗೆ ಈ ಕಾರ್ಯಕ್ರಮ ಏರ್ಪಾಡಾಗಿದೆ.

## ಮದುವೆ ಹಾಡಿನ ಜಗಳ : ವರನಿಂದ ಅತಿಥಿ ಹತ್ಯೆ

ಮುಜಾಫರನಗರ (ಉತ್ತರ ಪ್ರದೇಶ), ಮೇ 10- ಮದುವೆಯಲ್ಲಿ ಹಾಡೊಂದನ್ನು ನುಡಿಸುವು ದಕ್ಕೆ ಸಂಬಂಧಿಸಿದಂತೆ ಉಂಟಾದ ಜಗಳದಿಂದಾಗಿ ಅತಿಥಿಯೊಬ್ಬರನ್ನು ವರ ಗುಂಡು ಹಾರಿಸಿ ಹತ್ಯೆಗೈದ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಪ್ರದೇಶದ ಮುಜಾಫರನಗರದ ಶಹಪುರ ಎಂಬಲ್ಲಿ ಮದುವೆಯ ಮೆರವಣಿಗೆ ನಡೆಯುವಾಗ ನುಡಿಸಲಾದ ಹಾಡಿನ ಬಗ್ಗೆ ಆಕ್ಷೇಪ ವ್ಯಕ್ತಪಡಿಸಲಾಯಿತು. ಆಗ ಮದುವೆಗೆ ಬಂದಿದ್ದ ಗಂಡು ಹಾಗೂ ಹೆಣ್ಣಿನ ಕಡೆಯವರ ನಡುವೆ ಘರ್ಷಣೆ ನಡೆಯಿತು. ಆಗ ವರ ಇಫ್ತಿಕಾರ್ ಎಂಬಾತ ಗುಂಡು ಹಾರಿಸಿ ವಧುವಿನ ಕಡೆಯ ಜಫರ್ ಅಲಿಯನ್ನು ಹತ್ಯೆ ಮಾಡಿರುವುದಾಗಿ ಪೊಲೀಸ್ ವರಿಷ್ಠಾಧಿಕಾರಿ (ಗ್ರಾಮಾಂತರ) ಅತುಲ್ ಶ್ರೀವಾಸ್ತವ ಹೇಳಿದ್ದಾರೆ.

ಘಟನೆಯ ನಂತರ ಪೊಲೀಸರು ಇಫ್ತಿಕಾರ್‌ನನ್ನು ಬಂಧಿಸಿದ್ದು, ಗ್ರಾಮದಾದ್ಯಂತ ಭದ್ರತೆ ಹೆಚ್ಚಿಸಿದ್ದಾರೆ.

## ಬಡ ಹೆಣ್ಣು ಮಕ್ಕಳ ಶಾಲೆಗೆ ಪ್ರವೇಶ

ದಾವಣಗೆರೆ, ಮೇ 10- ನಗರದ 'ರಶ್ಮಿ' ಹೆಣ್ಣು ಮಕ್ಕಳ ಉಚಿತ ವಸತಿಯುತ ಪ್ರಾಥಮಿಕ ಮತ್ತು ಪ್ರೌಢಶಾಲೆಯ 1 ರಿಂದ 9 ನೇ ತರಗತಿ ವರೆಗೆ ಓದ ಬಯಸುವ ಹೆಣ್ಣು ಮಕ್ಕಳಿಗೆ ನಾಡಿದ್ದು ದಿನಾಂಕ 12 ರಂದು ಸಂದರ್ಶನ ನಡೆಯಲಿದೆ. ಅನಾಥ, ನಿರ್ಗತಿಕ, ಕಡುಬಡ ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶ. ವಿವರಕ್ಕೆ ಸಂಪರ್ಕಿಸಿ : 7026908835, 9916362288.

## ಅಂಗನವಾಡಿ ಕಾರ್ಯಕರ್ತೆಯರ ಧರಣಿ

ದಾವಣಗೆರೆ, ಮೇ 10- ನಾಡಿದ್ದು ದಿನಾಂಕ 12 ರಿಂದ ಬೆಂಗಳೂರು ಫ್ರೀಡಂ ಪಾರ್ಕಿನಲ್ಲಿ ಮಿನಿ ಅಂಗನವಾಡಿ ಕಾರ್ಯಕರ್ತೆಯರು ಅನಿರ್ದಿಷ್ಟಾವಧಿ ಧರಣಿ ನಡೆಸಲಿದ್ದಾರೆ ಎಂದು ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಫೆಡರೇಷನ್ ದಾವಣಗೆರೆ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಮಲ್ಲಮ್ಮ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಬೂಸ್ಟರ್ ಡೋಸ್ ಲಸಿಕೆ

ವರದಿಗಾರರ ಕೂಟದಲ್ಲಿ ಇಂದು ಬೆಳಿಗ್ಗೆ 10.30ರಿಂದ ಬೂಸ್ಟರ್ ಡೋಸ್ ಹಾಕುವ ಕಾರ್ಯಕ್ರಮವಿದ್ದು, ಮೊದಲ ದಿನ ಲಸಿಕೆ ಹಾಕಿಸಿಕೊಳ್ಳದ ಪತ್ರಕರ್ತ ಸದಸ್ಯರು ಸೇರಿದಂತೆ ಮುದ್ರಣಾಲಯಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ, ಪತ್ರಿಕಾ ವಿತರಕರು ಬೂಸ್ಟರ್ ಡೋಸ್ ಪಡೆಯಬೇಕೆಂದು ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ ತಿಳಿಸಿದ್ದಾರೆ.

## ಹರಿಹರ ನಗರಸಭೆ ಕರ ವಸೂಲಿಗಾರ ಮಂಜಪ್ಪ ಅಮಾನತ್ತು

ಹರಿಹರ, ಮೇ 10- ಇಲ್ಲಿನ ನಗರಸಭೆ ಕರ ವಸೂಲಿಗಾರ ಡಿ. ಮಂಜಪ್ಪ ಅವರನ್ನು ಜಿಲ್ಲಾಧಿಕಾರಿಗಳು ಅಮಾನತ್ತು ಮಾಡಿದ್ದಾರೆ.

ಪಿರ್ಯಾದಿ ರಾಘವೇಂದ್ರ, ಅವರ ಗುತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರ್ಲಾಪುರ ಗ್ರಾಮದ ರಿ.ಸ.ನಂ 39/3 ರಲ್ಲಿ ಸೈಟ್ ನಂಬರ್ 7ರಲ್ಲಿನ 80x50 ಅಡಿ ಉದ್ದಗಲದ ನಿವೇಶನವನ್ನು ಖಾತೆ ಬದಾಲಾವಣೆ ಮಾಡಿಕೊಡಲು ರೂ.1,50,000/-ಗಳ ಲಂಚದ ಬೇಡಿಕೆ ಇಟ್ಟಿದ್ದು, ದಿನಾಂಕ 6.04.2022 ರಂದು ಆಪಾದಿತನು ರೂ.1,00,000/-ಲಂಚದ ಹಣ ಸ್ವೀಕರಿಸಿ ಹಣದ ಸಮೇತ ಸಿಕ್ಕಿಬಿದ್ದಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಈ ಕ್ರಮ ಕೈಗೊಂಡಿದ್ದಾರೆ.

## ವಿಶ್ವಕರ್ಮ : ನಗರದಲ್ಲಿ ಇಂದಿನಿಂದ ಸಾಮೂಹಿಕ ಉಪನಯನ, ವಿವಾಹ

ವಿಶ್ವಕರ್ಮ ಸಮಾಜ ಸಂಘದಿಂದ ಇಂದಿನಿಂದ ಮೂರು ದಿನ 39ನೇ ವರ್ಷದ ಸಾಮೂಹಿಕ ಉಪನಯನ, ವಿವಾಹ ಮಹೋತ್ಸವ ಹಾಗೂ ಶ್ರೀ ಕಾಳಿಕಾದೇವಿ ಮೂರ್ತಿ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಬ್ರಾಹ್ಮೀ ಮುಹೂರ್ತದಲ್ಲಿ ದೇವಸ್ಥಾನ ಆವರಣದಲ್ಲಿ ಶ್ರೀ ಕಾಳಿಕಾದೇವಿಯ ಮೂರ್ತಿ ಪುನರ್ ಪ್ರತಿಷ್ಠಾಪನೆ, ನಾಳೆ ದಿನಾಂಕ 13ರಂದು ಬ್ರಾಹ್ಮೀ ಮುಹೂರ್ತದಲ್ಲಿ ವಟುಗಳಿಗೆ ಯಜ್ಞೋಪವೀತ ಧಾರಣೆ ಮತ್ತು ಬ್ರಹ್ಮೋಪದೇಶ ಹಾಗೂ ಬೆಳಿಗ್ಗೆ 7.10 ರಿಂದ ಸಾಮೂಹಿಕ ವಿವಾಹ ಮಹೋತ್ಸವ ಜರುಗಲಿದೆ ಎಂದು ಸಮಾಜ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಎಂ. ಕೊಟ್ರೇಶಾಚಾರ್ (9731870799) ತಿಳಿಸಿದ್ದಾರೆ.


ನಿರುದ್ಯೋಗಿ ಯುವಕ / ಯುವತಿಯರಿಗೆ ಸುವರ್ಣಾವಕಾಶ

ಆಯುರ್ವೇದ ಚಿಕಿತ್ಸೆಯಲ್ಲಿ ಒಂದಾದ ಪಂಚಕರ್ಮ ಚಿಕಿತ್ಸೆ ದೇಶ-ವಿದೇಶಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಈ ಪಂಚಕರ್ಮ ಚಿಕಿತ್ಸೆಯನ್ನು ಟ್ರೈನಿಂಗ್ ರೂಪದಲ್ಲಿ 6 ತಿಂಗಳು ಕೊಟ್ಟು, ತದನಂತರ ನಮ್ಮದೇ ಕೇಂದ್ರದಲ್ಲಿ ಅಥವಾ ಬೇರೆ ಆಸ್ಪತ್ರೆಗಳಲ್ಲಿ ಕೆಲಸವನ್ನು ನೀಡಲು ಸಹಾಯ ಮಾಡುತ್ತೇವೆ. ಈ ಚಿಕಿತ್ಸೆಯನ್ನು ಕಲಿತವರು ದೇಶ-ವಿದೇಶಗಳಲ್ಲಿ ನೆಲೆಸಿ ಅತ್ಯುತ್ತಮ ಸಂಬಳ ಪಡೆಯಬಹುದುದಾಗಿದೆ. ಏಕೆಂದರೆ ಎಲ್ಲಾ ಕಡೆ ಪಂಚಕರ್ಮ ಥೆರಪಿಸ್ಟ್‌ಗಳಿಗೆ ಬಹಳ ಬೇಡಿಕೆ ಇದೆ. ಕೇಂದ್ರ ಸರ್ಕಾರದ ಕೌಶಲ್ಯ ಮಂಡಳಿ ನಿರ್ದೇಶನದ ಮೇರೆಗೆ ದಾವಣಗೆರೆಯಲ್ಲಿ ಪ್ರಪ್ರಥಮವಾಗಿ ಯುವ ಜನರ ಕೌಶಲ್ಯ ಅಭಿವೃದ್ಧಿಗೆ ಅನ್ವಯ ಆಯುರ್ವೇದ ಆಸ್ಪತ್ರೆಯಲ್ಲಿ ಉಚಿತ ತರಬೇತಿಯನ್ನು ನೀಡಲಾಗುವುದು. ಈ ತರಬೇತಿಯು 6 ತಿಂಗಳಾದ್ದಾಗಿದ್ದು,ಮೊದಲ ತಿಂಗಳಿನಿಂದಲೇ ಸಂಬಳ ಇರುತ್ತದೆ.


ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
08192 252228 / 86186 42929
ವಯೋಮಿತಿ : 18-35 ವರ್ಷ, ವಿದ್ಯಾಭ್ಯಾಸ - SSLC, PUC



ಮಹಿಳಾ ಸೇವಾ ಸಮಾಜ (ರಿ.)

ಮಹಿಳಾ ಸಮಾಜ ಪ್ರಥಮ ದರ್ಜೆ (ಪದವಿ) ಮಹಿಳಾ ಕಾಲೇಜು

(ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ ಇದರ ವ್ಯಾಪ್ತಿಗೆ ಒಳಪಟ್ಟು, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಅಶೋಕ ರಸ್ತೆ, ದಾವಣಗೆರೆ-2. ಫೋನ್ : 08192-233010, 296684



2022-23ನೇ ಸಾಲಿನ ಪದವಿ ತರಗತಿಗಳಿಗೆ ಪ್ರವೇಶ ಪ್ರಕಟಣೆ

ವಿಷಯ ಸಂಯೋಜನೆಗಳು : ಭಾಷಾ ವಿಷಯಗಳು : ಕನ್ನಡ, ಇಂಗ್ಲಿಷ್, ಹಿಂದಿ.

ಐಚ್ಛಿಕ ವಿಷಯ ಸಂಯೋಜನೆಗಳು :

B.A. : ಇತಿಹಾಸ, ಸಮಾಜಶಾಸ್ತ್ರ (HS)
ಅರ್ಥಶಾಸ್ತ್ರ, ರಾಜ್ಯಶಾಸ್ತ್ರ (EP)
ಅರ್ಥಶಾಸ್ತ್ರ, ಇತಿಹಾಸ (EH)
B.Com : ಬ್ಯಾಚುಲರ್ ಆಫ್ ಕಾಮರ್ಸ್
B.C.A. : ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ವಿಷಯಗಳು

ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

ಕಾಲೇಜಿನ ವೈಶಿಷ್ಟತೆ :
☛ ಕಾಲೇಜ್ ನಗರದ ಮಧ್ಯಭಾಗದಲ್ಲಿದೆ. ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ.
☛ ವಿಶಾಲವಾದ ಕಟ್ಟಡ ☛ ಸುಸಜ್ಜಿತವಾದ ಗ್ರಂಥಾಲಯ
☛ ಅನುಭವಿ ಉಪನ್ಯಾಸಕರಿಂದ ಬೋಧನೆ ☛ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು
☛ ಹೆಣ್ಣು ಮಕ್ಕಳಿಗೆ ವಿಶೇಷವಾದ ಭದ್ರತೆ ಹಾಗೂ ವೈಯಕ್ತಿಕ ಗಮನ
☛ ಮಾಸಿಕ ಪರೀಕ್ಷೆಗಳ ಮೂಲಕ ಪ್ರಗತಿಯೆಡೆಗೆ.

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 10-30 ರಿಂದ 2-00 ಗಂಟೆಯವರೆಗೆ ವಿತರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ರವಿಕುಮಾರ ಹೆಚ್.ಎಸ್. ಮೊ : 9980432468, ಬಸವೇಶ್ ವಿ.ಬಿ. ಮೊ : 9964005860

ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು
ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ
ಶ್ರೀ ಎಂ. ಹೆಚ್. ಪ್ರಸನ್ನ, ಪ್ರಾಚಾರ್ಯರು, ಮೊ : 9481867531

# ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಣೆ



ದಾವಣಗೆರೆ ಮೇ 10- ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಸರಳವಾಗಿ ಇಂದು ಆಚರಿಸಲಾಯಿತು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಮೇಯರ್ ಜಯಮ್ಮ ಗೋಪಿನಾಯ್ಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎ.ಚನ್ನಪ್ಪ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಡಿಯುಡಿಸಿ ನಜ್ಮಾ, ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ರವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್, ಸಮಾಜದ ಅಧ್ಯಕ್ಷರಾದ ಕೊಟ್ರೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

## ಅಮಿತ್ ಷಾ ಅವರಿಗೆ 850 ರೂ.ಗಳ ನೀರಿನ ಬಾಟಲಿ ನೀಡಲಾಗಿತ್ತು : ಗೋವಾ ಸಚಿವ

ಪಣಜಿ, ಮೇ 10 - ಅಮಿತ್ ಷಾ ಅವರು ಇತ್ತೀಚೆಗೆ ಗೋವಾಗೆ ಭೇಟಿ ನೀಡಿದ್ದ ವೇಳೆ, ಅವರಿಗೆ 850 ರೂ. ಬೆಲೆಯ ನೀರಿನ ಬಾಟಲು ನೀಡಲಾಗಿತ್ತು ಎಂದು ಗೋವಾ ಕೃಷಿ ಸಚಿವ ರವಿ ನಾಯ್ಕ ಹೇಳಿದ್ದಾರೆ. ಕಾರ್ಯ ಕ್ರಮವೊಂದರಲ್ಲಿ ಮಾತ ನಾಡುತ್ತಿದ್ದ ಅವರು, ಮುಂದಿನ ದಿನಗಳಲ್ಲಿ ಕುಡಿ ಯುವ ನೀರಿನ ಸಮಸ್ಯೆ ಎಷ್ಟು ಭೀಕರವಾಗಿ ರಲಿದೆ ಹಾಗೂ ಮಳೆ ನೀರು ಕೊಯ್ಲು ಅಗತ್ಯತೆ ಕುರಿತು ವಿವರಿಸುವಾಗ ಈ ವಿಷಯ ತಿಳಿಸಿದ್ದಾರೆ.

ಕಳೆದ ಫೆಬ್ರವರಿಯಲ್ಲಿ ನಡೆದ ಚುನಾವಣೆ ವೇಳೆ ರಾಜ್ಯಕ್ಕೆ ಭೇಟಿ ನೀಡಿದ್ದ ಷಾ ಅವರು ಹಿಮಾಲಯ ಬ್ರ್ಯಾಂಡ್‌ನ ನೀರಿನ ಬಾಟಲು ನೀಡುವಂತೆ ಹೇಳಿದರು. ಪಣಜಿಯಿಂದ 10 ಕಿ.ಮೀ. ದೂರದ ಮಾಪುಸಾದಿಂದ 850 ರೂ. ಬೆಲೆಯ, ಆ ಬ್ರ್ಯಾಂಡಿನ ನೀರಿನ ಬಾಟಲು ತರಿಸಿ ಕೊಡಲಾಗಿತ್ತು ಎಂದು ನಾಯಕ್ ಹೇಳಿದರು. ತಾರಾ ಹೋಟೆಲ್‌ಗಳಲ್ಲಿ ಮಾರಾಟವಾಗುವ ಮಿನರಲ್ ನೀರಿನ ಬಾಟಲಿಗಳ ಬೆಲೆ 150-160 ರೂ. ಆಗಿದೆ. ನೀರು ಇಷ್ಟೊಂದು ದುಬಾರಿಯಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

# ವಿದೇಶಿ ದೇಣಿಗೆ ಭ್ರಷ್ಟಾಚಾರ : 40 ಕಡೆ ದಾಳಿ

ನವದೆಹಲಿ, ಮೇ 10 – ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಡಿ ದೇಣಿಗೆ ಪಡೆಯಲು ಅನುಮತಿ ನೀಡುವಾಗ ಸರ್ಕಾರೇತರ ಸಂಘಟನೆಗಳ ಜೊತೆ ಅಧಿಕಾರಿಗಳು ಶಾಮೀಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿ.ಬಿ.ಐ. 40 ತಾಣಗಳ ಮೇಲೆ ದಾಳಿ ನಡೆಸಿದೆ.

ದೆಹಲಿ, ಚೆನ್ನೈ, ಮೈಸೂರು, ಕೊಯಂಬತ್ತೂರು ಸೇರಿದಂತೆ ಹಲವೆಡೆ ದಾಳಿ ನಡೆಸಲಾಗಿದೆ. ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್.ಸಿ.ಆರ್.ಎ.) ಅನ್ವಯ ವಿದೇಶಿ ದೇಣಿಗೆ ಪಡೆಯಲು ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ಎಫ್.ಸಿ.ಆರ್.ಎ. ವಿಭಾಗದ ಕೆಲ ಅಧಿಕಾರಿಗಳು ಸರ್ಕಾರೇತರ ಸಂಘಟನೆಗಳ ಜೊತೆ ಕೈ ಜೋಡಿಸಿ ಅಕ್ರಮವಾಗಿ ಅನುಮತಿ ಪಡೆಯಲು ನೆರವಾಗಿದ್ದರು ಎಂದು ಆರೋಪಿಸಲಾಗಿದೆ.

ಈ ಬಗ್ಗೆ ಸರ್ಕಾರಿ ಅಧಿಕಾರಿಗಳೂ ಸೇರಿದಂತೆ ಕೆಲ ವ್ಯಕ್ತಿಗಳನ್ನು ಸಿ.ಬಿ.ಐ. ವಿಚಾರಣೆಗೆ ಒಳಪಡಿಸಿದೆ.

ಹವಾಲಾ ಮಾರ್ಗಗಳ ಮೂಲಕ ಸುಮಾರು 2 ಕೋಟಿ ರೂ. ಅಕ್ರಮ ವಹಿವಾಟು ಪತ್ತೆಯಾಗಿದೆ. ಈ ಬಗ್ಗೆ ಹತ್ತು ಜನರನ್ನು ಬಂಧಿಸಲಾಗಿದೆ ಎಂದು ಸಿ.ಬಿ.ಐ. ಮೂಲಗಳು ತಿಳಿಸಿವೆ.

# ಶ್ರೇಷ್ಠ ಸಂಶೋಧನಾ ಪ್ರಕಟಣೆ ಮೂವರು ಪ್ರಾಧ್ಯಾಪಕರಿಗೆ ಪ್ರಶಸ್ತಿ







ದಾವಣಗೆರೆ, ಮೇ 10 - ದಾವಣಗೆರೆ ವಿಶ್ವವಿದ್ಯಾನಿಲಯದ ಮೂವರು ಪ್ರಾಧ್ಯಾಪಕರುಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಕರ್ನಾಟಕ ಸರ್ಕಾರ ನೀಡುವ ಪ್ರತಿಷ್ಠಿತ ಪ್ರಶಸ್ತಿಯಾದ ಶ್ರೇಷ್ಠ ಸಂಶೋಧನಾ ಪ್ರಕಟಣೆಗಳಿಗೆ ಪ್ರಶಸ್ತಿ ಲಭಿಸಿದೆ.


ದಾವಣಗೆರೆ ವಿಶ್ವ ವಿದ್ಯಾನಿಲಯದ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಗಾಯತ್ರಿ ದೇವರಾಜ್, ಗಣಿತಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರುಗಳಾದ ಡಾ. ಡಿ. ಜಿ. ಪ್ರಕಾಶ್ ಮತ್ತು ಡಾ. ಬಿ. ಸಿ. ಪ್ರಸನ್ನ ಕುಮಾರ್ ಅವರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕರ್ನಾಟಕ ರಾಜ್ಯದ ವಿಶ್ವ ವಿದ್ಯಾನಿಲಯಗಳು, ಕಾಲೇಜುಗಳು ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಧ್ಯಾಪಕರುಗಳ ಸಂಶೋಧನಾ ಪ್ರಬಂಧಗಳ ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಸ್ತರಣೆಯನ್ನು ಪ್ರೋತ್ಸಾಹಿಸಲು ಪ್ರತಿ ವರ್ಷ 20 ಸಂಶೋಧನಾ ಪ್ರಕಟಣೆಗಳಿಗಾಗಿ ಈ ಪ್ರಶಸ್ತಿ ನೀಡಲಾಗುತ್ತದೆ. ಬೆಂಗಳೂರಿನ ಸಂಶೋಧನಾ ಸಂಸ್ಥೆ ಜವಾಹರ್ ಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್‌ನಲ್ಲಿ ಕಳೆದ ವಾರ ನಡೆದ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಸಿ. ಎನ್. ಅಶ್ವತ್ಥ್ ನಾರಾಯಣ್ ಪ್ರಶಸ್ತಿ ಪ್ರದಾನ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಭಾರತ ರತ್ನ ಡಾ. ಸಿ. ಎನ್. ಆರ್. ರಾವ್ ವಹಿಸಿದ್ದರು.

## ದಾವಣಗೆರೆ ಕ್ಲಬ್‌ನಲ್ಲಿಂದು ಲಸಿಕೆ ಶಿಬಿರ

ದಾವಣಗೆರೆ ಕ್ಲಬ್ ಆವರಣದಲ್ಲಿ 60 ವರ್ಷ ಮೇಲ್ಪಟ್ಟವರಿಗೆ ಉಚಿತ ಕೊರೊನಾ ಬೂಸ್ಟರ್ ಡೋಸ್ ಲಸಿಕಾ ಶಿಬಿರವು ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ (ಕೋವಿ ಶೀಲ್ಡ್ ಹಾಗೂ ಕೋ ವ್ಯಾಕ್ಸಿನ್) ನಡೆಯಲಿದೆ.

## ಹಾಸಬಾವಿ ಮಲ್ಲಿಕಾರ್ಜುನ್ ನಿಧನ



ದಾವಣಗೆರೆ ಹಾಸಬಾವಿ ಸರ್ಕಲ್ ವಾಸಿ
ಲಿಂ. ಶ್ರೀ ಹಾಸಬಾವಿ ಜಯಪ್ಪನವರ ಪುತ್ರರೂ, ವರ್ತಕರೂ ಆದ

**ಶ್ರೀ ಹಾಸಬಾವಿ ಮಲ್ಲಿಕಾರ್ಜುನ್**

ಅವರು ದಿನಾಂಕ 10.5.2022 ರ ಮಂಗಳವಾರ ಸಂಜೆ 7.50 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 66 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.5.2022ರ ಬುಧವಾರ ಮಧ್ಯಾಹ್ನ 2 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ
ಹಾಸಬಾವಿ ಕರಿಬಸಪ್ಪ ಮತ್ತು
ಸೋದರರು ಮಕ್ಕಳು ಮತ್ತು ಅಳಿಯಂದಿರು
ಮೊ : 94498 30762, 95352 33786

# ಉಚ್ಚಂಗಿದುರ್ಗ: ಸಾಮೂಹಿಕ ವಿವಾಹ

ಹರಪನಹಳ್ಳಿ, ಮೇ 10 - ತಾಲ್ಲೂಕಿನ ಉಚ್ಚಂಗಿದುರ್ಗದ ಶ್ರೀ ಉತ್ಸವಾಂಬ ದೇವಿಯ ದೇವಾಲಯದಲ್ಲಿ ಇದೇ ದಿನಾಂಕ 25 ರಂದು ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಉತ್ಸವಾಂಬ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹೆಚ್. ಮಲ್ಲಪ್ಪ ತಿಳಿಸಿದ್ದಾರೆ. ಸಾಮೂಹಿಕ ವಿವಾಹಕ್ಕೆ ವಧು-ವರರು ನೋಂದಾಯಿಸಿಕೊಳ್ಳಲು ಕಡೆಯ ನಾಡಿದ್ದು ದಿನಾಂಕ 10 ಕೊನೆ ದಿನ.


SCIENCE ACADEMY (R.)
(A Unique Centre For P.U. Classes)
# 307/2 B, 1 floor, 2nd main, P.J. Extn, Near Stadium, Davangere-4.
ADMISSION STARTED FOR
CET–NEET CRASH COURSE
Classes starts from 13 th May 2022 (Friday)
Hostel facility is available for both Boys and Girls
AC CLASS ROOMS
For more Details contact:
Office: Mobile: 99803 68779, 94481 78087
"We don't have any other branches in Davangere in the name of Academy".


















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte